International Journal of Kannada Research
www.kannadajournal.com

ISSN: 2454–5813
IJKR 2020; 6(4): 08-21
© 2020 IJKR
www.kannadajournal.com
Received: 09-08-2020
Accepted: 13-09-2020

**ರ್‍ಯಾವಮ್ಮಾ ಬಸವರಾಜ**
ಸಂಶೋಧನ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

**Corresponding Author:**
**ರ್‍ಯಾವಮ್ಮಾ ಬಸವರಾಜ**
ಸಂಶೋಧನ ವಿದ್ಯಾರ್ಥಿನಿ
ಕನ್ನಡ ಅಧ್ಯಯನ ಸಂಸ್ಥೆ,
ಗುಲಬರ್ಗಾ ವಿಶ್ವವಿದ್ಯಾಲಯ
ಕಲಬುರಗಿ

# ಶರಣ ರೇವಪ್ಪಯ್ಯನವರ ಜೀವನ–ಸಾಧನೆ

**ರ್‍ಯಾವಮ್ಮಾ ಬಸವರಾಜ**

ಕನ್ನಡ ನಾಡು ಪುಣ್ಯದ ನಾಡು. ಈ ನಾಡಿನ ಗರ್ಭದಲ್ಲಿ ಶತ–ಶತಮಾನದಿಂದಲೂ ಅನೇಕ ಮುತ್ತುರತ್ನಗಳಂತೆ ಯೋಗಿಗಳು, ತ್ಯಾಗಿಗಳು, ಶರಣರು, ಸಂತರು, ಅನುಭಾವಿಗಳು, ಆತ್ಮಜ್ಞಾನಿಗಳು, ಶಿವಾಚಾರ್ಯರು ಉದಯಿಸುತ್ತಾ ಬಂದಿದ್ದಾರೆ. ಸಮಾಜ ಸೇವೆಯ ಕಾಯಕದಲ್ಲಿ ನಿತ್ಯ ನಿರಂತರ ಶ್ರೀಗಂಧದ ಸುವಾಸನೆಯಂತೆ ಸಕಲರಿಗೆ ಲೇಸನೆ ಬಯಸುತ್ತ, ವೀರಶೈವ ಧರ್ಮದ ತತ್ವಗಳನ್ನು ಬೆಳೆಸುತ್ತ ಬೆಳಕನ್ನು ನೀಡುತ್ತ ಅನೇಕ ಶಿವಶರಣರು ಆಗಿ ಹೋಗಿದ್ದಾರೆ. ಅಂತಹವರ ಪಥದಲ್ಲಿ ಕಲ್ಯಾಣ ನಾಡಿನ ಶರಣರೆಂದು ಹೆಸರು ಪಡೆದ ಮಹಾತ್ಮ ಶ್ರೀ ರೇವಪ್ಪಯ್ಯ ಶರಣರು ಒಬ್ಬರಾಗಿದ್ದಾರೆ.

ಶರಣ ರೇವಪ್ಪಯ್ಯನವರ ಜನ್ಮವನ್ನು ಕುರಿತು ೧೨ನೇ ಶತಮಾನದಲ್ಲಿ ರೇವಣಸಿದ್ಧ ಶಿವಾಚಾರ್ಯರ ಪುತ್ರನಾದ ರುದ್ರಮುನಿ ದೇವರು ಬರೆದಿರುವ; ಕಾಲಜ್ಞಾನ ತಾಡೋಲೆ ಲಿಪಿಯೊಂದರಲ್ಲಿ ರೇವಪ್ಪಯ್ಯ ಶರಣರ ಅವತಾರ ಮತ್ತು ಅವರ ಧರ್ಮ ಕ್ರಾಂತಿಯ ಬಗ್ಗೆ ಸ್ಪಷ್ಟ ಉಲ್ಲೇಖವಿದೆ. ಆ ಉಲ್ಲೇಖವು ಈ ರೀತಿಯಿದೆ.

ಕಲ್ಯಾಣದ ಪೂರ್ವದಿಶೆಯ ಏಳುಗಾವುದ ಪುರ ಒಂದರಲ್ಲಿ ಕಲಿಯುಗ ಆರಂಭವಾದ ಐದು ಸಾವಿರ ವರುಷಕ್ಕೆ ಶ್ಯಾಮವರ್ಣ ಶ್ವೇತವಸ್ತ್ರ ಧರಿಸುವ ಕುಳ್ಳನೋರ್ವನವತಾರ ಅದಾಗ್ಗೆ ಧರ್ಮ ಕ್ರಾಂತಿ ವೀರಶೈವ ಧರ್ಮದ ಪುನರುತ್ಥಾನ; ಮತ್ತೇ ಮುಂದೊಂದು ಕಾಲದೊಳು ಕಲ್ಯಾಣ ಪಟ್ಟಣಕ್ಕೆ ರೈಲು ಬಂದಾಗ ಆ ಕುಳ್ಳನ ಪುನರವತಾರ ಬಸವಾದಿ ಪ್ರಮಥರ ಆಗಮನ ಆ ವ್ಯಾಳದೊಳು ಕಲ್ಯಾಣ ರಾಜ್ಯ ನಿರ್ಮಾಣವೆಂದು ಸ್ಪಷ್ಟವಾಗಿ ಬರೆದಿರಲಾಗಿದೆ.

ವಿಶ್ಲೇಷಣೆ : ಈ ಕಾಲಜ್ಞಾನ ಉಲ್ಲೇಖಿಸಿದಂತೆ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ನಾವದಗಿ ಏಳು ಮೈಲು ಅಂತರದಲ್ಲೇ ಬಸವಕಲ್ಯಾಣ ಪಟ್ಟಣವಿದೆ. ರೇವಪ್ಪಯ್ಯನವರು ಗಿಡ್ಡವಾಗಿದ್ದರು ಸಜ್ಜೆಬಣ್ಣ, ಶುಭ್ರ ಉಡುಪು ಧರಿಸುತ್ತಿದ್ದರು. ಕಲ್ಯಾಣ ನಾಡಿನಲ್ಲಿ ಧರ್ಮ ಕ್ರಾಂತಿ ಜರುಗಿದೆ. ವೀರಶೈವಧರ್ಮ ಪುನರೋತ್ಥಾನಗೊಂಡಿದೆ. ಇದಕ್ಕೆ ಸಾಕಷ್ಟು ಸಾಕ್ಷಧಾರಗಳು ಲಭಿಸುತ್ತವೆ. ಅಪ್ಪಗಳು ರುದ್ರಮುನಿ ದೇವರು ಬರೆದಿರುವ ಕಾಲಜ್ಞಾನ ಉಲ್ಲೇಖದ ಪ್ರತಿರೂಪವಾಗಿ ಧರೆಗಿಳಿದು ಬಂದು ಧರ್ಮ ಕ್ರಾಂತಿಯ ಹರಿಕಾರರೆನ್ನುವುದಕ್ಕೆ ತಿಲ ಮಾತ್ರ ಸಂಶಯ ಬರುವುದಿಲ್ಲ.

ಶರಣರ ಜನನವಾಗುವುದು ವೃದ್ಧ ದಂಪತಿಗಳ ಉದರದಲ್ಲಿ. ಈ ಮಹಾತ್ಮರ ತಂದೆ ಹಾವಯ್ಯ ತಾಯಿ ನಾಗಮ್ಮನವರಿಗೆ ಬಹುಕಾಲ ಅಂದರೆ ವೃದ್ಧಾವಸ್ಥೆಯು ಸಮಿಪಿಸುತ್ತಲೇ ಇತ್ತು. ಆದರೂ ಇವರಿಗೆ ಮಕ್ಕಳು ಆಗಿರಲಿಲ್ಲ. ಈ ದಂಪತಿಗಳಿಗೆ ಮಕ್ಕಳುಬೇಕೆಂಬ ಕುತೂಹಲವು ಇರಲಿಲ್ಲ. ಸದಾಚಾರ, ದಯೆ, ಕರುಣೆ, ಪರೋಪಕಾರ ಮುಂತಾದ ಸದ್ಗುಣಗಳು ಬೆಳೆದು ಬಂದಿದ್ದವು. ನಾಗಮ್ಮ ಧಾರ್ಮಿಕ ಮನೋಭಾವದ ಉದಾರ ಹೃದಯದ ಗುಣ ಸಂಪನ್ನೆ ಸ್ವಭಾವಂತಹ ಭಕ್ತಿಯ ಗಂಗೆ ಅವಳಲ್ಲಿ ನೆಲೆ ನಿಂತಿತ್ತು. ನಾಗಮ್ಮ ಪುತ್ರ ಪ್ರಾಪ್ತಿಗಾಗಿ ರೇವಗ್ಗಿ (ರಟಕಲ) ರೇವಣಸಿದ್ದೇಶ್ವರರಲ್ಲಿ ಹರಕೆ ಹೊತ್ತಿರುತ್ತಾಳೆ, ಹಾಗೂ ಒಬ್ಬ ಸಂತರು ಮನೆಗೆ ಬಂದು ಷಣ್ಮುಖ ಸ್ವಾಮಿಯ ಭಿನ್ನಹ ಮಾಡಲು ಸೂಚಿಸಿರುತ್ತಾರೆ. ಷಣ್ಮುಖ ಸ್ವಾಮಿಯ ವೃತ ಕೈಗೊಂಡು, ಷಣ್ಮುಖನೇ ಹುಟ್ಟಿಬರುವವನು ಎಂದು ಕರಿಗಡಬು ತುಪ್ಪದ ವಿಶೇಷ ಅನ್ನ ದಾಸೋಹ ನಡೆಯಿಸಿ ಈ ದಂಪತಿಗಳು ತೃಪ್ತಿ ಪಡುತ್ತಿದ್ದರು. ಜಂಗಮ ಮುಖದಿಂದ ಲಿಂಗಯ್ಯನೆ ಕೊಂಬುವನೆಂದು ಅಂಥ ಶ್ರದ್ಧೆನಿಷ್ಠೆ ಇವರದಾಗಿತ್ತು. ಈ ಷಣ್ಮುಖ ಸ್ವಾಮಿಯ ಭಿನ್ನಹ ಇಂದಿಗೂ ಅಂದರೆ ಕಾರಹುಣ್ಣಿಮೆ ನಂತರ ೫ನೇ ಮಂಗಳವಾರ ಬರಬಹುದು, ಅಥವಾ ಭಾನುವಾರ ಯಾವುದಾದರೂ ಸರಿ ಆ ದಿನ ನಾವದಗಿಯಲ್ಲಿ ಕರಿಗಡಬು ತುಪ್ಪದ ಭಿನ್ನಹ ಭಕ್ತರು ವಿಜೃಂಭಣೆಯಿಂದಮಾಡಿಕೊಂಡು ಬರುತ್ತಿದ್ದಾರೆ. ಆ ಬಿನ್ನಕ್ಕೆ ನಾನು ಕುಡಾ ಸುಮಾರು ವರ್ಷಗಳಿಂದ

ಹೋಗುತ್ತಿದ್ದೇನೆ. ಆ ಬಿನ್ನಹದಲ್ಲಿ ಸುಮಾರು ಸಾವಿರಗಟ್ಟಲೇ ಜನಜಂಗುಳಿ ಇರುತ್ತದೆ. ಗುರುಲಿಂಗ ಜಂಗಮರ ಸೇವೆಯನ್ನು ಒಕ್ಕಲುತನದೊಂದಿಗೆ ಹಾವಯ್ಯ ಚಾಚೂತಪ್ಪದೆ ನಡೆಯಿಸಿಕೊಂಡು ಬರುತ್ತಿದ್ದರು. ಸುತ್ತಲು ಹಳ್ಳಿಗಳಿಗೆ ದಾನ ಧರ್ಮ ಪರೋಪಕಾರಕ್ಕೆ ಹಾವಯ್ಯನ ಹೆಸರು ಪ್ರಖ್ಯಾತಿಗೊಂಡಿತ್ತು. ಮಕ್ಕಳಿಲ್ಲದಿದ್ದರೂ ಸಮಾಧಾನದ ಸಂಸಾರದ ಬಾಳದೋಣಿ ಸಾಗಿಸುತ್ತಿದ್ದರು. ತಮ್ಮ ಪಾಡಿಗಾಗಿ ಶಿವನನ್ನು ಶಪಿಸುವರಲ್ಲ. ಬಡ ಬಗ್ಗರಿಗೆ ದಾನವಿಕ್ಕುವ ಕೈಯನ್ನು ಯಾವತ್ತಿಗೂ ಹಿಂದಕ್ಕೆ ಸೆಳೆದವರಲ್ಲ. ಅವರ ಉದಾರ ಮನೋಭಾವನೆಗೆ ಊರಿಗೆ ಊರೇ ಬಾಗಿತ್ತು. ಪ್ರೀತಿ, ಪ್ರೇಮ, ವಿಶ್ವಾಸದಿಂದ ಜನಮನ ಗೆದ್ದಿದ್ದರು. ಅಲ್ಲದೇ ಶಿವನೊಲುಮೆಗೆ ಪಾತ್ರರಾಗಿದ್ದರು. ಸದಾಚಾರವೇ ಶಿವನೊಲುಮೆ ಎಂಬುದನ್ನು ಈ ದಂಪತಿಗಳು ಅರಿತಿದ್ದರು.

"ಶಿವನೊಲಿದರೆ ಕೊರಡು ಕೊನರುವದು ಬರಡು ಹಯನುವದು" ಎಂಬ ಮಾತು ಸತ್ಯ. ಹಾವಯ್ಯ ನಾಗಮ್ಮರ ವ್ರತಕ್ಕೆ ಶಿವನು ಬಾಗಿದನು. ಈ ವೃದ್ಧ ದಂಪತಿಗಳ ವೃದ್ದಾಪ್ಯದಲ್ಲಿ ಅಂದರೆ ಹಾವಯ್ಯನವರ ಸುಮಾರು ೭೦ನೇ ವಯಸ್ಸು ನಾಗಮಾಂಬೆಯ ೬೫ರ ವಯಸ್ಸಿನಲ್ಲಿ ಬಸುರೆಯಾಗುವವಳು. ಸೋಜಿಗವಷ್ಟೇ ಅಲ್ಲ ಆಶ್ಚರ್ಯಕರ ಸಂಗತಿ ಹೌದು. ಈ ಶುಭ ಸಮಾಚಾರ ಗ್ರಾಮದಲ್ಲೆಲ್ಲ ಹರಡಿ ಜನತೆಯ ಹರ್ಷೋಲ್ಲಾಸಕ್ಕೆ ಎಣೆ ಇಲ್ಲವಾಯಿತು. ನವಮಾಸಗಳು ತುಂಬಿದವು. ಸೀಮಂತೋತ್ಸವಕ್ಕೆ ಬಂಧು ಬಳಗದವರು ಬಂದಿಳಿದರು. ಹರ್ಷದ ಹೊನಲು ಊರಿನ ತುಂಬೆಲ್ಲ ಹರಿಯಿತು. ಈ ಸೀಮಂತೋತ್ಸವವು ಅತೀ ವಿಜೃಂಭಣೆಯಿಂದ ವೈಭವಪೂರಿತವಾಗಿ ಜರುಗಿತು.

ಪ್ರಕೃತಿ ದೇವಿಯ ಮಡಿಲಲ್ಲಿ ಮಲಗಿದ ಹಾಲುಗಲ್ಲದ ಹಸುಳೆಯಂತೆ ಕಣ್ಮನ ಸೆಳೆಯುವುದು. ಗ್ರಾಮಕ್ಕೆ ಹೊಂದುಕೊಂಡ ಜುಳು-ಜುಳು ನಾದ ಮಾಡುತ್ತ, ಹಳ್ಳ ಹರಿಯುತ್ತಲಿದೆ. ನೀರಿನ ಆಶ್ರಯದಿಂದ ಬೆಳೆದುನಿಂತ ಹೂ-ಗಿಡ ಮರಗಳು ಮಾವಿನ, ಬೇವಿನ, ಹುಣಸೆಯ, ಚಂದನದ ಹೆಮ್ಮರಗಳು ಮುಗಿಲೆತ್ತರಕ್ಕೆ ಬೆಳೆದು ನಿಂತಿವೆ. ಗ್ರಾಮದ ಸುತ್ತಲೂ ಕಾರ್ಮೋಡದಂತಿರುವ ಕಪ್ಪುವರ್ಣದ ಫಲವತ್ತಾದ ಭೂಮಿ ಹಚ್ಚಹಸುರಿನಿಂದ ಶೋಭಿಸುತ್ತದೆ. ಭೂದೇವಿಯ ಮಡಿಲಲ್ಲಿ ಬೆಳೆದುನಿಂತ ಪೈರುಗಳನ್ನು ನೋಡಲು ಎರಡು ಹೃದಯವು ಕುಣಿಯುವುದು. ಇಂತಹ ಪ್ರದೇಶದಲ್ಲಿಯೇ ಶಾಲಿವಾಹನ ಶಕೆ (೧೭೫೩) ಶ್ರಾವಣ ಬಾಹುಳ ದ್ವಾದಶಿ ಗುರುವಾರ ದಿವಸ ಕ್ರಿ.ಶ (೧೮೩೧)ರಲ್ಲಿ ಧರೆಗಿಳಿದು ಬಂದ, ಭಗವಂತ ನಾವಮಾಂಬೆಯ ಉದರದಿಂದ ಪ್ರಚಂಡ ತೇಜ ರವಿ ತೇಜ ಜಗವೆಲ್ಲ ಬೆಳಗಿದನು.

ಭಾರತ ಮಾತೆಯ ಮಡಿಲಿನ ಮುದ್ದು
ಮಹಾಕಾರಣಿಕ ವಿಭೂತಿ ತಾನೆಂದು
ಭಕ್ತರ ಮನದಲ್ಲಿ ಮಹಾದೇವನೆಂದು
ಜಗಜ್ಯೋತಿಯಾಗಿ ಬೆಳೆಗಿದೆ ಇಂದು
ಜೋ ಜೋ ಜೋ ಜೋ ಜೋ................

ಎಂದು ತೊಟ್ಟಿಲು ಕಾರ್ಯಕ್ರಮವನ್ನು ಮುಗಿಸಿದರು. ರೇವಗ್ಗಿ ಗ್ರಾಮದ ರೇವಣಸಿದ್ದೇಶ್ವರ ಮನೆಯ ದೇವರಿದ್ದ ಕಾರಣ ಈ ಮಗುವಿಗೆ ರೇವಪ್ಪಯ್ಯನೆಂದು ನಾಮಕರಣ ಮಾಡಲಾಯಿತು. ಬಿದಿಗೆಯ ಚಂದ್ರನಂತೆ ಮಗು ಬೆಳೆಯ ತೊಡಗಿತು."ಬೆಳೆಯುವ ಸಿರಿ ಮೊಳಕೆಯಲ್ಲಿ" ಎಂಬಂತೆ ಬಾಲಕನ ದಿವ್ಯ ಲಕ್ಷಣವನ್ನು ಕಂಡು ಬಲ್ಲವರು ಬಸವಾದಿ ಪ್ರಮಥರಂತೆ ಈ ಬಾಲಕನು ಮಹಾ ಶಿವಶರಣನಾಗುವನೆಂದು ಭವಿಷ್ಯ ನುಡಿದರು.

ಬಾಂದಳದಲ್ಲಿ ಭಾಸ್ಕರನು ಮೂಡಿ ಏರುತ್ತ ಹೋದ ಹಾಗೆ ಅವನ ದಿವ್ಯ ತೇಜಸ್ಸು ಹೆಚ್ಚುತ್ತ ಹೋಗುವಂತೆ ದಿನಗಳರುಳುತ್ತ ಹೋದ ಹಾಗೆ ಈ ಬಾಲಕನಾದ ರೇವಪ್ಪಯ್ಯರಲ್ಲಿ ಅಭೂತ ಪೂರ್ವವಾದ ಗುಣಲಕ್ಷಣಗಳು ಪ್ರಕಾಶಮಾನವಾಗಿ ಪ್ರಜ್ವಲಿಸತೊಡಗಿದವು. ಸುಂದರವಾದ ಮುದ್ದು ಬಾಲಕ ರೇವಪ್ಪಯ್ಯನು ತನ್ನ ಅನಂತ ಬಾಲಲೀಲೆಗಳಿಂದ ಓಣೆಯ ಮಕ್ಕಳ ಮನ ಮತ್ತು ತಮ್ಮ ಊರಿನ ಹಿರಿಯರ ದೃಷ್ಟಿ ಸೆಳೆದರು. ಮಕ್ಕಳೊಡನೆ ಮಗುವಾಗಿ ಆಡುವುದು, ಹಿರಿಯರೊಡನೆ ಹಿರಿಯರಂತೆ ನಡೆದುಕೊಳ್ಳುವುದನ್ನು ಬಾಲ್ಯದಿಂದಲೇ ರೇವಪ್ಪಯ್ಯ ಮಾಡತೊಡಗಿದ. ಯಾವಾಗಲೂ ಈ ಬಾಲಕನ ಆಟದಲ್ಲಿ ಶಿವನ ಪೂಜೆ, ಶಿವನ ಲೀಲೆ ಇರಲೇಬೇಕು. ಇದು ಇವರ ಆಟ-ಪಾಠಗಳ ವೈಶಿಷ್ಟ್ಯವಾಗಿತ್ತು.

ಲಿಂಗವಂತರು ಅಂಗದ ಮೇಲೆ ಧರಿಸಿಕೊಳ್ಳುವಂತೆ ಲಿಂಗ ಪಥವನ್ನು ಅರಿಯಬೇಕು. ಈ ಪಥವನ್ನು ತೋರಿಸುವವನೇ ಗುರು. ಅಂದರೆ ಊರಿಗೆ ಹೋಗುವಾತನಿಗೆ ಯಾರಾದರೂ ದಾರಿ ತೋರಬೇಲ್ಲವೇ, ನಿಜವ ತೋರುವ ಗುರುವು ಯಾರಾದರಾಗಲಿ ಅವರೇ ಸದ್ಗುರು. ರೇವಪ್ಪಯ್ಯನವರಿಗೆ ೮ನೇಯ ವಯಸ್ಸಿನಲ್ಲಿಯೇ ಮನೆಯ ಗುರುಗಳಾದ ಮೇಹಕರ ಪಟ್ಟದೇವರಿಂದ ಅಯ್ಯಚಾರ ದೀಕ್ಷಾ ಸಮಾರಂಭ ಏರ್ಪಟ್ಟಿತು. ಈ ಅಯ್ಯಚಾರ ದೀಕ್ಷಾ ಕಾರ್ಯಕ್ರಮವನ್ನು ಸಮರ್ಥ ಗುರುಗಳನ್ನು ಹುಡುಕಿ ದೀಕ್ಷಾ ಕೊಡುಸುವುದು ತಾಯಿ-ತಂದೆಗಳ ಮುಖ್ಯ ಕರ್ತವ್ಯ. ಹಾವಯ್ಯನವರು ತಮ್ಮ ಈ ಕರ್ತವ್ಯದಲ್ಲಿ ಜಯಶೀಲರಾದರು. ಯೋಗ್ಯ ಗುರುವಿನಿಂದ ದೀಕ್ಷೆ ಕೊಡಿಸಿ ಮಗುವಿನ ಜನ್ಮ ಪಾವನಗೊಳಿಸಿದರು. ತಮ್ಮ ಜೀವನ ಸಾರ್ಥಕ ಪಡಿಸಿಕೊಂಡರು. ಹಾಗೂ ಅಕ್ಷರಾಭ್ಯಾಸಕ್ಕೆ ತಾಯಿ-ತಂದೆಯರು ಪ್ರೋತ್ಸಾಹಕೊಟ್ಟರು. ರೇವಪ್ಪಯ್ಯನವರಿಗೆ ಶಿಕ್ಷಣ ಕಲಿಯಲು ತುಂಬಾ ಅಭಿರುಚಿ ಇತ್ತು. ಖಾಸಗಿ ಶಾಲೆಯಲ್ಲಿ ಧಾರ್ಮಿಕ, ತಾಂತ್ರಿಕ, ನೈತಿಕ ಶಿಕ್ಷಣವನ್ನು ಕೊಡಿಸಿದರು.

ಆ ಕಾಲದಲ್ಲಿ ಕನ್ನಡ ಈ ಭಾಗದಲ್ಲಿ ಅಷ್ಟು ಪ್ರಚಾರದಲ್ಲಿ ಇರಲಿಲ್ಲ. ಕನ್ನಡ ಭಾಷೆಯ ಸ್ಥಾನದಲ್ಲಿ ಉರ್ದು, ತೆಲಗು, ಫಾರ್ಸಿ, ಮೋಡಿ, ಮುಂತಾದ ಭಾಷೆಗಳ ಪ್ರಭುತ್ವವಿತ್ತು. ಕಾಲಜ್ಞಾನ ಹೇಳುವ ಜಂಗಮರಿಗಲ್ಲದೆ ಇನ್ನುಳಿದವರಿಗೆ ಕನ್ನಡ ಬರುತ್ತಿರಲ್ಲಿಲ್ಲ. ೧೦-೧೨ನೇ ಶತಮಾನದಲ್ಲಿ ಇದ್ದ ಕನ್ನಡ ಭಾಷೆ ನಂತರದ ಶತಮಾನಗಳಲ್ಲಿ ಅಂದರೆ ಸುಮಾರು ೧೮-೧೯ನೇ ಶತಮಾನದಲ್ಲಿ ಲಿಪಿಯಿಲ್ಲದ ಭಾಷೆಯಂತೆ ಜನ ತಪ್ಪು ತಿಳಿದುಕೊಂಡಿತ್ತು. ಅಪ್ಪನವರು ಕನ್ನಡ ಭಾಷೆಯಲ್ಲಿ ಆ ಕಾಲಕ್ಕೆ ಪ್ರಭುತ್ವಗಳಿಸಿದ್ದರಲ್ಲದೆ ಬಸವಪುರಾಣ ಮುಖೋದ್ಗತ ಮಾಡಿಕೊಂಡಿದ್ದರು. ಎಲ್ಲ ಭಾಷೆಯ ತಾಡೋಲೆ ಗ್ರಂಥಗಳನ್ನು ಸಂಗ್ರಹಿಸಿದ್ದರು. ಅವುಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿತ್ತಿದ್ದರು. ರೇವಪ್ಪಯ್ಯನವರು ತಾವು ಓದಿದ ಪುಸ್ತಕದ ಹೆಸರು ಅಧ್ಯಾಯದ ಪುಟದ ಸಂಖ್ಯೆ ಮುಂತಾದವುಗಳನ್ನು ಸಂದರ್ಭನುಸಾರವಾಗಿ ನಿರೂಪಿಸುತ್ತಿದ್ದರು. ಅಪ್ಪನವರು ೬೪ ವಿದ್ಯೆಗಳನ್ನು ಬಲ್ಲವರಾಗಿದ್ದರು. ಹಾಗೂ ಹಲವು ಭಾಷೆಗಳಲ್ಲಿ ಪ್ರವೀಣರಾಗಿದ್ದರು.

ರೇವಪ್ಪಯ್ಯನವರು ಬಾಲ್ಯಾವಸ್ಥೆಯಿಂದ ಬೆಳೆದು ಪ್ರಾಪ್ತವಯಸ್ಕರರಾಗಿ ತುಂಬು ತಾರುಣ್ಯಕ್ಕೆ ಬಂದಾಗ ತಾಯಿ-ತಂದೆಗಳು ಮದುವೆ ಮಾಡಬೇಕೆಂದು ವಿಚಾರ ವಿನಿಮಯ ಮಾಡಿಕೊಂಡು ವಧುವನ್ನು ನೋಡುವುದಕ್ಕೆ ಕೊನೆಗೆ ಹುಮನಾಬಾದ ತಾಲೂಕಿನ ನೆರೆಹಳ್ಳಿ ಧುಮ್ಮನಸೂರ ಗ್ರಾಮದಲ್ಲಿ ಪೂರ್ವದ ಸಂಬಂಧಿಕರಲ್ಲಿ ವಧುವನ್ನು ನಿಶ್ಚಯಮಾಡಿದರು. ತಮ್ಮ ಮನೆತನದ ಹಿರಿಮೆಗೆ ಒಪ್ಪುವ ಕನ್ಯಾಮಣಿ ಮಠಪತಿ ಮನೆತನದ ಸಿದ್ದಯ್ಯ-ನೀಲಮ್ಮರ ಮಗಳು ರೇವಮ್ಮಳೇ ಒಪ್ಪುವಳು, ಹಾಲು-ಜೇನು ಕೂಡಿದಂತಾಯಿತು. ಎರಡು ಮನೆತನದವರ ಆನಂದಕ್ಕೆ ಪಾರವೇ ಇಲ್ಲ. "ಸತಿಪತಿಗಳೊಂದಾದ ಭಕುತಿ ಹಿತವಾಗಿಪ್ಪುದು ಶಿವಂಗೆ" ಎಂಬ ಶರಣರ ವಾಣಿಯಂತೆ ವಿಜೃಂಭಣೆಯಿಂದ ಮದುವೆ ನೆರವೇರಿತು.

ರೇವಮ್ಮನವರು ಪತಿಯ ಹಾದಿಯಲ್ಲಿ ಹೆಜ್ಜೆ ಇಟ್ಟು ನಡೆದು ಅವರ ಆಜ್ಞೆಯನ್ನು ನಿರಂತರ ಪಾಲಿಸಿ ಅವರಿಗೆ ಹೇಸರನ್ನು ತಂದರು.

"ಉದ್ಯೋಗಂ ಪುರುಷ ಲಕ್ಷಣಂ" ಎಂಬ ಶ್ರುತಿವಾಣಿಯಂತೆ ಸ್ವಾವಲಂಭಿ ಬದುಕುವ ಮನುಷ್ಯನ ಲಕ್ಷಣ. ಅದಕ್ಕೆ ಶರಣರು ಕಾಯಕದಲ್ಲೇ ಕೈಲಾಸವೆಂಬುದನ್ನು ಕಂಡರು. ಅದಕ್ಕಾಗಿ ರೇವಪ್ಪಯ್ಯನವರು ಸಮಾಜೋದ್ಧಾರ ಹಾಗೂ ಸ್ವಹಿತ ದೃಷ್ಟಿಕೋನ ಎರಡನ್ನು ಕಂಡು ಶಿಕ್ಷಕವೃತ್ತಿಗೆ ಮುಂದಾದರು. ಕ್ರಿ.ಶ ೧೮೫೫ರ ಸುಮಾರಿಗೆ ನಿಜಾಮನ ಆಡಳಿತದಲ್ಲಿ ರೇವಪ್ಪನವರು ನೆರೆಹಳ್ಳಿಯಾದ ಖಟಕ ಚಿಂಚೋಳಿಯಲ್ಲಿ ಕನ್ನಡ ಶಾಲೆಯನ್ನು ತೆರೆದು ಆ ಶಾಲೆಗೆ ಸ್ವತಃ ಶಿಕ್ಷಕರಾಗಿದ್ದರು.

ಓ ಗಡಿ ನಾಡ ಕನ್ನಡಿಗ ಒಗ್ಗಟ್ಟಾಗಿ ಬನ್ನಿರಿ
ಶ್ರೀ ರೇವಪ್ಪಯ್ಯನವರ ಕನ್ನಡ ಸಂಘ ಸೇರಿರಿ
ಗಡಿನಾಡು ಪರಿಷತ್ತು ನಮ್ಮದೆನ್ನೇರಿ!
ಕನ್ನಡ ಕಟ್ಟಲು ಕಂಕಣ ಬದ್ದರಾಗಿರಿ

ಎಂದು ಗಡಿ ನಾಡಿನಲ್ಲಿ ಪೂಜ್ಯ ರೇವಪ್ಪಯ್ಯನವರು ದಲಿತರಿಗೆ ಧರ್ಮ ದೀಕ್ಷೆ ನೀಡಿದ್ದಲ್ಲದೆ, ಕನ್ನಡ ಕಲಿಸಿದ ಪ್ರಥಮಾಚಾರ್ಯರು. ಅವರ ಹೆಸರಿನಲ್ಲಿ ಸಂಘಕಟ್ಟಿ ಕನ್ನಡಕ್ಕಾಗಿ ಹೋರಾಡಲು ಕರೆ ನೀಡಿರುವುದು ನಿಜಕ್ಕೂ ಸ್ವಾಗತಾರ್ಹವಾದುದು. ಇದು ಕನ್ನಡ ಉಳಿಸಿ ಬೆಳಸಬೇಕೆನ್ನುವ ಚಿಂತಕರಿಗೆ ಪ್ರೇರಣೆ ನೀಡುತ್ತದೆ.

ರೇವಪ್ಪಯ್ಯನವರು ನಿಜಾಮನ ಕಾಲದಲ್ಲಿ ಕನ್ನಡವೇ ಮುಚ್ಚಿ ಹೊಗಿದ್ದ ಸಂದರ್ಭದಲ್ಲಿ ಕನ್ನಡನ್ನು ಕಲಿತು, ಶರಣರ ವಚನಗಳನ್ನು ಅಭ್ಯಸಿಸಿ ತಾಡೋಲೆಗಳನ್ನು ಓದಿ ಯಾರಿಗೂ ಅಂಜದೆ ಅಳುಕದೆ, ಕನ್ನಡ ಶಾಲೆ ತೆರೆದು ಹೊರಗಡೆಯೇ ಕನ್ನಡ ಶಾಲೆಯ ಫಲಕವನ್ನು ನೇತಾಕಿ ಕನ್ನಡ ಕಲಿಸಿದ ಮಹಾನ್ ಶಿಕ್ಷಕ, ವೀರ, ಧೀರ, ಶೂರ, ಕನ್ನಡ ಕಸ್ತೂರಿಯ ಕಂಪು ಈ ನಾಡಿನಲ್ಲಿ ಹರಡಿಸಿದರು. ೬೦ ವರ್ಷಗಳ ಪೂರ್ವದಲ್ಲೇ ಕನ್ನಡಾಂಬೆ ರಥ ಎಳೆದ ರೇವಪ್ಪಯ್ಯನವರು. ಮುಂಜಾನೆ ಮಕ್ಕಳಿಗೆ ಅಕ್ಷರ ಕಲಿಸಿ ರಾತ್ರಿ ಹಿರಿಯರಿಗೆ ತಮ್ಮ ಅನುಭವದ ನುಡಿಗಳನ್ನು ಹೇಳುತ್ತಿದ್ದರು. ವಿಷಯ ಬದಲಾವಣೆ ರೇವಪ್ಪಯ್ಯನವರಿಗೆ ವಿಶ್ರಾಂತಿಯನ್ನು ನೀಡುತ್ತಿತ್ತು. ರೇವಪ್ಪಯ್ಯನವರು ಶರಣರ ವಚನಗಳನ್ನು ಅರ್ಥ ಓಡೆದು ಹೇಳಿದರೆ ಜನ ಸಮುದಾಯ ಆನಂದ ಪರವಶರಾಗುತ್ತಿದ್ದರು. ಇದರಿಂದ ಊರಿನ ಮಕ್ಕಳಿಗೂ ಯುವಕರಿಗೂ, ಹಿರಿಯರಿಗೂ, ಇವರು ಬಹುಬೇಗನೇ ಬೇಕಾದವರಾದರು. ಈ ಕಾರ್ಯದಿಂದ ಅವರಿಗೆ ಸ್ವಲ್ಪ ಆದಾಯವು ಬರುತ್ತಿತ್ತು. ಅದನ್ನು ರೇವಪ್ಪಯ್ಯನವರು "ನೀ ಕೊಟ್ಟ ದ್ರವ್ಯ ನಿಮಗಲ್ಲದೆ ಮತ್ತೊಂದು ಕ್ರಿಯೆ ಮಾಡೆನು" ಎನ್ನುವ ಶರಣರ ವಾಣಿಯಂತೆ ಕಾಯಕದಿಂದ ಬಂದ ಹಣದಲ್ಲಿ ತಮ್ಮ ಹಿತಮಿತ ಜೀವನ ಸಾಗಿಸಿ ಉಳಿದುದನ್ನು ಬಡ ಮಕ್ಕಳ ಅಭ್ಯಾಸಕ್ಕಾಗಿ ವಿನಿಯೋಗಿಸುತ್ತಿದ್ದರು. ಹೀಗೆ ಅವರ ವೃತ್ತಿಯು ಸುಮಾರು ೧೦-೧೧ ವರ್ಷಗಳ ಕಾಲ ನಡೆಯಿತು.

ಹೀಗಿರುವಾಗ ಒಂದು ದಿವಸ ಯಾವುದೊ ಸಾಮಾನ್ಯ ಕಾರಣಕ್ಕಾಗಿ ಬುದ್ಧಿ ಮಾಂಧ್ಯ ಮಗುವಿಗೆ ನಸುಗೋಪದಿಂದ ಒಂದೆರಡು ಏಟು ಹೊಡೆದರು. ಆ ಮಗುವಿನ ತಾಯಿ ಇವರ ಬಳಿ ಬಂದು ಸಿಟ್ಟಿನ ಭರದಲ್ಲಿ ಒಂದೇ ಸವನೆ ಬಯ್ಯ ತೊಡಗಿದಳು. ಆ ತಾಯಿ ಸಿಟ್ಟಿನಿಂದ "ನಿನ್ನಂತಹ ಅಯ್ಯ, ಶಾಲೆ ಕಲಿಸುವದಕ್ಕಿಂತ ಮುಂಗೈಗೆ ಜೋಳಿಗೆ ಹಾಕಿ ದೇಶಾಂತರಕ್ಕೆ ಹೋಗುವುದೇ ಲೇಸು" ಎಂದು ಬಿರುಸಾಗಿ ನುಡಿದಳು. "ಒಳ್ಳೆಯವರಿಗೆ ಯಾವಾತ್ತು ಒಳ್ಳೆಯ ಕಾಲವಿಲ್ಲ" ಎನ್ನುವ ಜನನುಡಿ ಅಕ್ಷರಾಂಶ ಸತ್ಯವೇನಿಸುತ್ತದೆ. ಸೂಕ್ಷ್ಮಮತಿಯಾದ ರೇವಪ್ಪಯ್ಯನವರಿಗೆ ಒಂದೇ ಸವನೇ ಈ ಮಾತು ಸ್ಮೃತಿಯ ಪಟಲದಲ್ಲಿ ನೆನಪಿಸ ತೋಡಗಿತು. ಇದು ಮುಂದಿನ ಹಂತಕ್ಕೆ ಅಂದರೆ ಅಧ್ಯಾತ್ಮಿಕ ಹಂಬಲ ಪುಟನೆಗೆದು ದೇಶಾಂತರಕ್ಕೆ ಹೊರಡು ಎಂದು ಪದೇ ಪದೇ ಯಾವುದೋ ಅಂತರರಂಗದ ಕೂಗು ಬಡಿದೆಬ್ಬಿಸಿತು. ಇದ್ದಕಿದಂತೆ ರೇವಪ್ಪಯ್ಯನವರು ಮುಂಜಾನೆ ಬೆಳಗಿನ ಜಾವ ಮುಖ ತೊಳೆದು ವಿಭೂತಿ ಧರಿಸಿಕೊಂಡು ಸ್ವಲ್ಪ ಧ್ಯಾನಿಸಿ, ಯಾರಿಗೂ ಹೇಳದೆ ಕೇಳದೆ ದೇಶಾಂತರಕ್ಕೆ ಹೊರಟೆ ಬಿಟ್ಟರು. ಈ ಅತ್ಯದ್ಭುತ ತಿರುವು ಅವರ ಜೀವನದಲ್ಲಿ ಆಕಸ್ಮಿಕವಾಗಿ ಕಂಡರು ಅನಿವಾರ್ಯವಾಗಿತ್ತು.

ಈ ಘಟನೆ ಲೋಕ ಶಿಕ್ಷಕನನ್ನಾಗಿ ರೂಪಿಸಿತು. ಕನ್ನಡ ಶಾಲೆಯ ಜಂಗಮಯ್ಯನವರನ್ನು ಜಗದಯ್ಯನಾಗಿ ಮಾಡಿತು. ಆಜ್ಞಾ ಮಹಿಳೆಯ ಬೈಗಳು ಶರಣರ ಅಂತರಂಗ ಶೋಧನೆಗೆ ಸಾಧನೆಗೆ ತಿರುವನ್ನೊದಗಿಸಿದವು. "ಬಳ್ಳಿಗೆ ಹೂ ಮೂಡಿದಂತೆ ವೈರಾಗ್ಯ ಅರಳಿತು" ಜಗಬೆಳಗಿತು. ಮಹಾ ಶಿವಶರಣ ವಿಶ್ವ ವಿಭೂತಿಯಾಗಿ ಮಾರ್ಪಾಡಾದದ್ದು ಈ ನೆಲದ ಭಾಗ್ಯವೆಂದೇ ಹೇಳಬೇಕು.

ರೇವಪ್ಪಯ್ಯನವರು ಎಲ್ಲಿದ್ದಾರೆ ? ಹೇಗಿದ್ದಾರೆ ? ಎಂಬುದು ಯಾರಿಗೂ ಏನು ಗೊತ್ತಾಗಲಿಲ್ಲ. ಹೀಗೆ ಹದಿನಾಲ್ಕು ವರ್ಷಗಳ ಕಾಲ ಅಜ್ಞಾ***ತದ*** ಸ್ಥಿತಿಯಲ್ಲಿ ಪಾದ ಸಂಚಾರ ಮೂಲಕ ಹಳ್ಳಿಗೆ ಏಕ ರಾತ್ರಿ ಪಟ್ಟಣಕ್ಕೆ ಪಂಚರಾತ್ರಿ ಇಡೀ ಭರತ ಖಂಡ ಸುತ್ತಿ ೧೨ ಜ್ಯೋತಿರ್ಲಿಂಗಗಳ ದರ್ಶನ ಮಾಡಿದ್ದರು. ತ್ರ್ಯಂಬಕೇಶ್ವರ, ಅಮರನಾಥ, ಗೌರಿಶಂಕರ, ಬೆಟ್ಟದ ನಾಲ್ಕು ಧಾಮಗಳು, ೧೦೮ ತೀರ್ಥಕ್ಷೇತ್ರಗಳಲ್ಲದೆ, ಉಳವಿ, ಶ್ರೀಶೈಲ, ಕೇದಾರ, ರಾಮೇಶ್ವರ, ಬಸವನ ಬಾಗೇವಾಡಿ, ಕೂಡಲ ಸಂಗಮ, ಹಂಪಿ, ಗೋಕರ್ಣ, ಏಡ್ರಿ, ಕೊಡಪಗಲ್ಲು, ಉಜ್ಜಯಿನಿ, ಉದಗೀರ, ನೀಲಿಗಂಗಮ್ಮನ ಗಿರಿ ಮುಂತಾದ ಸುಕ್ಷೇತ್ರಗಳಲ್ಲಿ ಶಿವಯೋಗಾನುಷ್ಠಾನ ಕೈಕೊಂಡು ಭಾರತ ದರ್ಶನ ಮಾಡಿದರು. ಇದ್ದರಿಂದ ಮನಃಶಾಂತಿ ತಂದುಕೊಂಡರು. ಅವರ ದಿವ್ಯ ಸಾಧನೆಯಿಂದ ಸರ್ವಸಿದ್ದಿಗಳು ಇವರ ವಶವಾದವು. ಯಾರು ಏನು ಬೇಡಿದರೂ ಅವರಿಗೆ ಕೊಡುವ ಸಾಮರ್ಥ್ಯವಾಯಿತು. ಗುರು-ಲಿಂಗ-ಜಂಗಮರಲ್ಲಿ ಅಪಾರವಾದ ಭಕ್ತಿನೆಲೆಸತೊಡಗಿತು. ವೀರಶೈವ ಲಿಂಗಾಯತ ಧರ್ಮದ ತತ್ವಗಳನ್ನು ಸಂಪೂರ್ಣ ಬಲ್ಲವರಾಗಿ ಚಾಚೂ ತಪ್ಪದೆ ಆಚರಿಸಬೇಕೆಂಬ ಪಣ ತೊಟ್ಟರು. "ಸ್ವಪಚನಾದರೇನು ಲಿಂಗ ಭಕ್ತನೆ ಕುಲಜರು" ಎನ್ನುವ ಬಸವಣನವ್ವನವರ ರಾಜಮಾರ್ಗವನ್ನೇ ಅನುಸರಿಸಿದರು.

ಎಲ್ಲಾ ಕ್ಷೇತ್ರಗಳಿಗೆ ಸಂಚರಿಸಿ ದರ್ಶನ ಪಡೆಯುತ್ತ ಕೊನೆಗೆ ಕಾಶಿಕ್ಷೇತ್ರಕ್ಕೆ ಬಂದು ತಲುಪಿದರು. ಅಲ್ಲಿ ಕಾಲಭೈರವನ ಮಂದೀರದಲ್ಲಿ ಉಗ್ರಾನುಷ್ಠಾನ ಕೈಗೊಂಡರು. ಕಾಲಭೈರವನನ್ನು ಒಲಿಸಿಕೊಂಡು ಕಾಲಭೈರವನ ಸಹಾಯದಿಂದ ಕಾಶಿ ವಿಶ್ವನಾಥನ ದರ್ಶನ ಕೇಳಿದರು. ಅವಾಗ ಕಾಲಭೈರವನು ಸಮಯವನ್ನು ಕೇಳಿದನು. ಆ ಸಮಯವನ್ನು ರೇವಪ್ಪಯ್ಯನವರು, ಅಲ್ಲಿ "ಜಂಗಮವಾಡಿಯಲ್ಲಿ ಪಂಚಪೀಠಗಳಲ್ಲೊಂದಾದ ಕಾಶಿ ಜಗದ್ಗುರುಗಳ ಮಠವನ್ನು ನಿರ್ಮಾಣದ ಹಂತದಲ್ಲಿತು. ಈ ಮಠ ಕಟ್ಟಲು ನೂರಾರು ಜನರು ಕೆಲಸ ಮಾಡುತ್ತಿದ್ದರು. ಆ ನೂರು ಮಂದಿಯೊಬ್ಬರಲ್ಲಿ ರೇವಪ್ಪಯ್ಯನವರು ಒಬ್ಬರಾದರು. ಅವರ ಸಮಯವನ್ನು ಈ ಮಠ ನಿರ್ಮಾಣಕ್ಕೆ ವಿನಿಯೋಗಿಸುತ್ತಿದ್ದರು. ಆದರೆ ಇವರು ಉಚಿತ ಸೇವೆಯನ್ನು ಮಾಡುತ್ತಿದ್ದರು. ಅದು ಅಲ್ಲಿರುವ ಮೆಲ್ವಿಚಾರಕರು ಮುಂಜಾನೆ ಹಾಜರಿಯನ್ನು ಬರೆದಾಗ ಉದಾ: ೧೦೦ ಆದರೆ ಕೂಲಿಯನ್ನು ಕೊಡುವಾಗ ೯೯ ಒಬ್ಬರು ಕಡಿಮೆ ಬೀಳುತ್ತಿದ್ದರು. ಯಾರೋ ಕೆಲಸ ಮಾಡಿ ಹಣವನ್ನು ಪಡೆಯದೇ ಹೋಗುತ್ತಿದ್ದಾರೆ. ಎಂದು ಚಿಂತಿಸುತ್ತಿದ್ದರು. ನಂತರ ಈ ವಿಷಯವನ್ನು ಅಲ್ಲಿನ ಜಗದ್ಗುರುಗಳಿಗೆ ತಿಳಿಸಿದರು.

ಅವರು ಯಾರು ಕೂಲಿ ಪಡೆಯದೇ ಹೊಗುತ್ತಿದ್ದಾರೆ, ಎಂದು ಅವರು ಇವತ್ತು ಸಾಯಂಕಾಲ ಕೂಲಿಯನ್ನು ನಾನೇ ಕೊಡುತ್ತೇನೆ

ಎಂದರು. ಆ ಕಾಲ ಅದಕ್ಕೆ ಆ ಚಿಂತನೆ ಆದರೆ ಇವಗಿನ ಕಾಲ ಇನ್ನೂ ಒಬ್ಬರು ಕೂಲಿ ಉಳಿದರೆ ತುಂಬಾ ಖುಷಿ ಪಡುತಿದ್ದರು. ಅದು ಕೂಡಾ ನಾನೇ ಮನೆಗೆ ತೆಗೆದುಕೊಂಡು ಹೋಗಬಹುದು ಅಂತ. ಅದೇ ತೇರನಾಗಿ ಅವರು ಸಾಯಂಕಾಲ ಕೂಲಿಯನ್ನು ಸರತಿಸಾಲಿನಿಂದ ಕೊಡಲು ಆರಂಭಿಸಿದ್ದರು. ಎಲ್ಲರೂ ಸಂಭಳವನ್ನು ತೆಗೆದುಕೊಂಡು ಹೋಗುತ್ತಿದ್ದರು. ಕೊನೆಗೆ ರೇವಪ್ಪಯ್ಯನವರ ಸರತಿಯು ಬಂದಿತ್ತು, ಅವರು "ನಾನು ಕೂಲಿಗಾಗಿ ಕೆಲಸ ಮಾಡಲಿಲ್ಲ. ನಾನು ಇಲ್ಲಿ ಬಂದದ್ದು ಬೇರೆ ಕಾರ್ಯಕ್ಕಾಗಿ ಎಂದರು". ಹೀಗೆ ವಾದ ವಿವಾದಗಳು ಜರುಗತೊಡಗಿದ್ದವು. ಹೀಗೆ ನಡೆದಿರುವಾಗ ಕೊನೆಗೆ ಇವರು ಸಾಮಾನ್ಯರಲ್ಲ ಎಂದು ಜಗದ್ಗುರುಗಳಿಗೆ ಮನವರಿಕೆಯಾಗುತ್ತದೆ.

ಕೆಲವು ದಿನಗಳ ನಂತರ ಜಗದ್ಗುರುಗಳು ತಮ್ಮ ಮನದಿಂಗಿತವನ್ನು ರೇವಪ್ಪಯ್ಯನವರಿಗೆ ಕರೆಯಿಸಿ ತಿಳಿಸುತ್ತಾರೆ. ಅದೇನೆಂದರೆ ರೇವಪ್ಪಯ್ಯರನ್ನು ಜಗದ್ಗುರುಗಳ ಪೀಠಕ್ಕೆ ಉತ್ತಾರಾಧಿಕಾರಿಯನ್ನು ಯಾಗಲು ಕೇಳುತ್ತಾರೆ. ಆದರೆ ರೇವಪ್ಪಯ್ಯನವರು ನಯ–ವಿನಾಯಪೂರ್ವಕವಾಗಿ ಖಡಾ ಖಂಡಿತವಾಗಿ "ನಾನು ಸಂಸಾರಿ ಸನ್ಯಾಸನಲ್ಲ, ನಾನು ಇಲ್ಲಿ ಬಂದಿರುವ ಉದ್ದೇಶವೇ ಬೇರೆಯಾಗಿದೆ. ಆದ್ದರಿಂದ ಈ ಕಾರ್ಯ ನನ್ನಿಂದ ಸಾಧ್ಯವಿಲ್ಲ" ಎಂದು ತಿರಸ್ಕರಿಸಿದರು. ಆವಾಗ ಜಗದ್ಗುರುಗಳು ಇವನನ್ನು ಹೇಗಾದರೂ ಮಾಡಿ ಪೀಠಕ್ಕೆ ತೆಗೆದುಕೊಳ್ಳಬೇಕೆಂದು ದಿಗ್ಬಂದನ ಹಾಕಿ ಬೀಡುತ್ತಾರೆ. ಅದು ಹೇಗೆ ಮತ್ತು ಎಲ್ಲಿಗೆ ಹೋಗತ್ತಾನೆ. ಎಂದು ದಿಗ್ಬಂದನ ಹಾಕಿ ಸುಮ್ಮನೇ ಇರುತ್ತಾರೆ.

ಅವಾಗ ರೇವಪ್ಪಯ್ಯನವರ ಮನವು ಕಳವಳಗೊಂಡಾಗ ಅವರು ಕಾಲಭೈರವನ ಮಂದೀರಕ್ಕೆ ಹೋಗಿ ಅನುಷ್ಠಾನ ಕೈಗೊಳ್ಳುತ್ತಾರೆ. ಅಲ್ಲಮ ಪ್ರಭುಗಳು ತಮ್ಮ ನೋವನ್ನು ಮರೆಯುವದಕ್ಕೆ ಅನಿಮಿಷ ಋಷಿಗಳ ಅಸ್ತಿ ಪಂಜರ ಕೈಯದ ಲಿಂಗ ಪ್ರಭುಗಳ ಕೈಗೆ ತಾಗಿತ್ತು. ನಂತರ ಅಲ್ಲಮ ಪ್ರಭುಗಳು ಬಸವ ಕಲ್ಯಾಣಕ್ಕೆ ಬಂದರು. ಹಾಗೇ ಇಲ್ಲಿ ಅನುಷ್ಠಾನಕ್ಕೆ ಕಾಲಭೈರವನು ಎಚ್ಚೆತ್ತಾನಾಗುತ್ತಾನೆ. ರೇವಪ್ಪಯ್ಯನವರು ವಿಶ್ವನಾಥನ ದರ್ಶನ ಬಗ್ಗೆ ವಿಷಯವನ್ನು ಮುಂದಿಡುತ್ತಾರೆ. ಆಗಲಿ ನಾಳೆ ಮಧ್ಯೆ ರಾತ್ರಿ ೧೨ ಗಂಟೆಗೆ ಬಾ ನಾನು ವಿಶ್ವನಾಥನ ಪರವಾನಗಿ ತೆಗೆದುಕೊಂಡು ಬರುತ್ತೇನೆ ಎಂದು ಕಾಲಭೈರವ ಹೇಳುತ್ತಾನೆ. ಅದರಂತೆಯೇ ವಿಶ್ವನಾಥನ ಮಂದೀರಕ್ಕೆ ಹೋಗಿ ಪರವಾನಗಿ ತೆಗೆದುಕೊಂಡು ಮಧ್ಯೆರಾತ್ರಿ ೧೨ ಗಂಟೆಗೆ ರೇವಪ್ಪಯ್ಯನವರನ್ನು ಕರೆದುಕೊಂಡು ಕಾಲಭೈರವ ವಿಶ್ವನಾಥನ ದರ್ಶನಕ್ಕೆ ಹೋಗುತ್ತಾರೆ. ಅಲ್ಲಿ ವಿಶ್ವನಾಥ ದರ್ಶನಗೊಂಡಾಗ ಹೇಳು ಮಗು ಏನು ಬೇಕು? ನೀನೆಕೆ ನನ್ನನ್ನು ಹುಡುಕಿಕೊಂಡು ಬಂದಿದ್ದೆಯಾ? ಎಂದಾಗ ರೇವಪ್ಪಯ್ಯನವರು ನನ್ನಗೆ ತಮ್ಮಿಂದ ಅನುಗ್ರಹವಾಗಬೇಕೆಂದು ಕೋರಿಕೆ ಇಟ್ಟರು. ಅವಾಗ ವಿಶ್ವನಾಥರು ಈ ಸಂದರ್ಭದಲ್ಲಿ ಈ ಕಾರ್ಯ ಆಗುವುದಿಲ್ಲ. ಮುಂದೆ ಒಂದು ದಿನ ನಿನ್ನ ಸ್ವಗ್ರಾಮದ ಪಶ್ಚಿಮದಿಕ್ಕಿನಿಂದ ಪೂರ್ವಕ್ಕೆ ನಂದಿರೂಢನ್ನಾಗಿ ರುದ್ರಗಂಬಳಿ ಹೊತ್ತು, ಕೈಯಲ್ಲಿ ನಂದಿ ಬೆತ್ತವಿಡಿದು ಕಾಶಾಂಬರ ತೊಟ್ಟು ನಿನ್ನ ಗ್ರಾಮದ ಸೀಮೆಯಲ್ಲಿ ದರ್ಶನಕೊಟ್ಟು ಅನುಗ್ರಹಿಸುತ್ತೇನೆ. ಎಂದು ಹೇಳಿ ಅಂತರ್ಧನರಾದರು. ನಂತರ ಕಾಲಭೈರವನು ನೀನು ವಿಶ್ವನಾಥನ ಗುಡಿಗೆ ಹಿಂದಕ್ಕೆ ತಿರುಗಿ ನೋಡಬೇಡ ನಿನ್ನಗೆ ಜಗದ್ಗುರುಗಳ ದಿಗ್ಬಂದವಿದೆ ಕಾರಣ ನೀನು ಕಾಶಿಸೀಮೆ ದಾಟುವವರೆಗೂ ಹಿಂದಕ್ಕೆ ತಿರುಗಿ ನೋಡದೆ ಹೊರಡು ಎಂದು ಹೇಳಿದನು.

ನಂತರ ರೇವಪ್ಪಯ್ಯನವರು ಸ್ವಗ್ರಾಮಕ್ಕೆ ಹೊಗುವುದು ಬಿಟ್ಟು ತಿರುಪತಿಗೆ ಹೋಗುತ್ತಾರೆ ಹೋಗಿದ್ದಾಗ ಅಲ್ಲಿ ರೇವಪ್ಪಯ್ಯನವರಿಗೆ ಶೀತಜ್ವರ ಬಂದು ಮೈ ಉಬ್ಬುತ್ತದೆ. ಅವರಿಗೆ ಏಕೆ ಈ ತರಹ ಆಗುತ್ತದೆ. ನಾನು ಉಳಿತ್ತೀನಿ ಅಥವಾ ಇಲ್ಲಿಯೇ ನನ್ನ ಅಂತ್ಯ ಕಾಣುತ್ತೇನೆ ಎಂದು ಭಾಸವಾಗುತ್ತದೆ. ಹೀಗೆ ಆರು ತಿಂಗಳುಗಳ ಕಾಲ ಗಿಡಮೂಲಿಕೆಯನ್ನು ತೆಗೆದುಕೊಂಡು ಗುಣವಾಗಿ ರೇವಪ್ಪಯ್ಯನವರು ತಮ್ಮ ಗ್ರಾಮಕ್ಕೆ ಸಿದ್ದರಾಗುತ್ತಾರೆ.

ಇಲ್ಲಿ ನಾವದಗಿಯಲ್ಲಿ ನಾಗಮ್ಮನವರು ಹೋದ ಮಗನ ಚಿಂತೆಯಲ್ಲಿ ಚಿಂತಿತರಾಗಿ ಮಗನ ಶೋಧನೆಯಲ್ಲಿರುತ್ತಾರೆ, ಆ ಕಡೆ ಗೋರಕ್ಷಪುರ (ಗೋರ್ಟಾ ಬಿ) ಸಿದ್ದಲಿಂಗೇಶ್ವರರ ಪ್ರಸಿದ್ಧಿಯೂ ನಾಲದೆಸೆಗೆ ಹಬ್ಬಿತ್ತು. ನಾಗಮ್ಮನವರು ಗೋರಕ್ಷಪುರ ಗ್ರಾಮಕ್ಕೆ ಹೋಗಿ ಸಿದ್ಧಲಿಂಗೇಶ್ವರರ ಎದುರು ಮಗನು ಮನೆಬಿಟ್ಟು ಹದಿನಾಲ್ಕು ವರ್ಷ ಹೋದ ವಿಷಯವನ್ನು ಕೇಳುತ್ತಾರೆ. ಆಗ ಸಿದ್ಧಲಿಂಗರು ಇನ್ನೂ ಕೆಲವೇ ದಿನಗಳಲ್ಲಿ ನಿಮ್ಮ ಮಗ ರೇವಪ್ಪಯ್ಯರು ನಿಮ್ಮ ಮಡಿಲಿಗೆ ಬರುತ್ತಾರೆ ಚಿಂತೆ ಬೇಡ ನಿಶ್ಚಿಂತೆಯಿಂದ ಹೋರಡಿ ತಾಯಿ ಎಂದು ಮತ್ತು ನಿಮ್ಮ ಮಗ ರೇವಪ್ಪ ಬಂದಾಗ ತಿಳಿಸಿ ಎಂದು ಹೇಳುತ್ತಾರೆ.

ಹೀಗೆ ಒಂದು ದಿನ ನಾಗಮ್ಮನವರ ಲಿಂಗವು ಕಳೆಯುತ್ತದೆ. ನಾಗಮ್ಮನವರು ಊಟ–ತಿಂಡಿ ಬಿಟ್ಟು ಚಿಂತನೆಯಲ್ಲಿರುತ್ತಾರೆ. ಎರಡನೇ ದಿನ ಊರಲ್ಲಿ ಮಹಾತ್ಮರು ಬಂದಿದ್ದಾರೆ ಜಡೆಯ ಬಿಟ್ಟು, ಗಡ್ಡ ಇದೆ, ಶುಭ್ರ ದೋತಿವಸ್ತ್ರ ಹಾಕಿಕೊಂಡು ಹನುಮಪ್ಪನ ಗುಡಿಯಲ್ಲಿ ಕುಂತಿರುತ್ತಾರೆ. ಈ ವಿಷಯ ಊರ ತುಂಬಾ ಹಬ್ಬುತ್ತದೆ. ನಾಗಮ್ಮನವರು ಮಹಾತ್ಮರನ್ನು ಮನೆಗೆ ಕರೆದುಕೊಂಡು ಹೋಗಿ ಮೊದಲು ತಮ್ಮ ಲಿಂಗ ಕಳೆದ ವಿಷಯವನ್ನು ಕೇಳುತ್ತಾರೆ. ಆವಾಗ ಮಹಾತ್ಮರು ತಾಯಿ ನಿಮ್ಮ ಲಿಂಗವು ನಿಮ್ಮ ಕರಡಿಯಲ್ಲಿಯೇ ಇದೇ ನೋಡಿ ತಾಯಿ ಎಂದರು. ನಾಗಮ್ಮನವರು ಇಲ್ಲ ಗುರುವೆ ನಾನು ಎರಡು ದಿನದಿಂದ ಉಪವಾಸ ಇದ್ದೇನಿ. ನಾನೇಕೆ ಸುಳ್ಳು ಹೇಳಲಿ ಇದ್ದರೆ ಎಂದರು ನೋಡಿ ತಾಯಿ ಲಿಂಗವು ಕರಡಿಯಲ್ಲಿ ನೋಡಿ ಪುನಃ ಕರಡಗಿ ತೆರೆದು ನೋಡಲು ಲಿಂಗಯ್ಯನನ್ನು ಕಂಡು ನಾಗಮ್ಮನವರು ಬಲು ಹಿಗ್ಗುತ್ತಾರೆ. ನಂತರ ನಾಗಮ್ಮನವರು ನನ್ನ ಮಗ ಮನೆಬಿಟ್ಟು ಹೋಗಿ ೧೪ ವರ್ಷಗಳು ಉರಳಿದವು ಇನ್ನೂ ಬಂದಿಲ್ಲ ಗುರುಗಳೇ ಬರುತ್ತಾನೋ ಇಲ್ಲವೋ, ಯಾವಾಗ ಬರುತ್ತಾನೆ ಎಂದಾಗ ರೇವಪ್ಪಯ್ಯನವರು ಕಣ್ಣು ಮುಚ್ಚಿರಿ ತಾಯಿ ಎಂದು ಹೇಳಿ ತಾಯಿಯ ಪಾದಕ್ಕೆ ಉರುಳುತ್ತಾರೆ. ಆವಾಗ ನಾಗಮ್ಮನವರು ಬಲು ಸಂತೋಷದಿಂದ ಮಗನನ್ನು ಅಪ್ಪಿಕೊಂಡು ಬಲು ಹಿಗ್ಗುತ್ತಾರೆ. ಮತ್ತು ಮಗನನ್ನು ಸೊಸೆಗೆ ಮನೆಗೆ ಕರೆದುಕೊಂಡು ಬರಲು ಧುಮ್ಮಸೂರಿಗೆ ಕಳುಹಿಸುತ್ತಾಳೆ. ಈ ಕಡೆ ತಾನು ಗೋರಕ್ಷಪುರಕೆ ಹೋಗಿ ಸಿದ್ದಲಿಂಗೇಶ್ವರರಿಗೆ ಮಗನಾದ ರೇವಪ್ಪಯ್ಯನವರು ಬಂದ ವಿಷಯವನ್ನು ತಿಳಿಸಲು ಹೋಗುತ್ತಾರೆ.

ರೇವಪ್ಪಯ್ಯನವರು ಧುಮ್ಮಸೂರಿಗೆ ಪತ್ನಿಯ ಮನೆಗೆ ಭಿಕ್ಷೆ ಬೇಡಲು ಹೋಗುತ್ತಾರೆ. ಆವಾಗ ರೇವಮ್ಮಳು ಪತಿಯನ್ನು ಗುರುತಿಸಿ ಮನೆಯೊಳಗೆ ಕರೆದುಕೊಂಡು ಹೋಗುತ್ತಾಳೆ. ಇಂತಹ ಪತಿ–ಪತ್ನಿಯರು ಸಮಾಜ್ಯಕ್ಕೆ ಆಧಾರಣೀಯ, ಏಕೆಂದರೆ ಹಿಂದೆ ೧೪ ವರ್ಷ ವನವಾಸ ಗೈದ ಸೀತಾದೇವಿಯ ಮೇಲೆ ರಾಮನೇ ಪರೀಕ್ಷಿಸುತ್ತಾನೆ ಹಾಗೂ ಇಲ್ಲಿ ರೇವಮ್ಮಳು ಹೇಳದೆ ಕೇಳದೆ ಬಿಟ್ಟು ಹೋದ ಪತಿಯನ್ನು ಕೂಡಾ ಪ್ರಶ್ನಿಸುವುದಿಲ್ಲ, ರೇವಪ್ಪಯ್ಯನವರು ಕೂಡಾ ನನಗೆ ಹೇಳದೆ ತವರಿಗೆ ಬಂದಿದ್ದಿಯಾ ಎಂದು ಕೇಳುವುದಿಲ್ಲ. ಅದೇ ಇಂದಿನ ಅಂದರೆ ಈ ಪ್ರಸ್ತುತ ಕಾಲದಲ್ಲಿ ಒಂದು ಫೋನ್ ಎತ್ತಲಿಲ್ಲ ಅಂದರೆ ಸಮಯಕ್ಕೆ ಮರುಮಾತನಾಡದೆ ವಿಚ್ಛೆದನ ಆಗುವ ಸ್ಥಿತಿಯಿದೆ. ಅಂತಹದರಲ್ಲಿ ೧೪ ವರ್ಷಗಳ ಕಾಲ ಬಿಟ್ಟು ಮತ್ತೇ ಅದೇ ನಂಬಿಕೆ ಅದೇ ಪ್ರೀತಿ ಯಾವುದೇ ವಾದ ವಿವಾದವಿಲ್ಲದೆ ಸಂಸಾರ ಪ್ರಾರಂಭಿಸುತ್ತಾರೆ.

ಸಂಸಾರದ ಜೊತೆಯಲ್ಲಿಯೇ ಮನೆಯಲ್ಲಿ ರೇವಪ್ಪನವರು ಭಜನೆ, ಕೀರ್ತನೆ, ಪ್ರಾರಂಭಿಸಿ ಶಿವನ ಧ್ಯಾನದಲ್ಲಿ ಇರುತ್ತಾರೆ. ಕೆಲದಿನಗಳ ನಂತರ ಸಿದ್ಧಲಿಂಗೇಶ್ವರರು, ಗೋರಾಕ್ಷಪುರದಿಂದ ಶಿರದ ಮೇಲೆ

ರುದ್ರಗಂಬಳಿ ಹೊತ್ತು ಕೈಯಲ್ಲಿ ನಂದಿಬೇತ್ತಹಿಡಿದು ನಂದಿವಾಹನ ರೂಢರಾಗಿ ನವಲಿಂಗಪೂರ (ನಾವದಗಿ)ಗೆ ಹೋರಡುತ್ತಾರೆ. ಸಿದ್ಧಲಿಂಗರು ಬರುತ್ತಿರುವ ವಿಷಯವನ್ನು ತಿಳಿದು ರೇವಪ್ಪಯ್ಯನವರು ಜೋರಾಗಿ ಭಜನೆ ಮಾಡಲು ಪ್ರಾರಂಭಿಸುತ್ತಾರೆ. ಏಕೆ ? ಈ ರೀತಿ ಜೋರಾಗಿ ಭಜನೆ ಮಾಡುತ್ತಿರಿ ಎಂದು ಜನರು ಕೇಳಿದಾಗ ಸಿದ್ಧಲಿಂಗರು ಬರುವ ವಿಷಯವನ್ನು ಹೇಳುತ್ತಾರೆ. ಹತ್ತಾರು ಜನರು ಸೇರಿ ನವಲಿಂಗಪೂರದ ಸೀಮೆಗೆ ಬರುತ್ತಾರೆ. ಆವಾಗ ಸಿದ್ಧಲಿಂಗರು ದರ್ಶನ ನೀಡಿ ದೀಕ್ಷೆಯನ್ನು ಕೊಡುತ್ತಾರೆ. ರೇವಪ್ಪಯ್ಯನರನ್ನು ದೀಕ್ಷೆಕೊಟ್ಟು ಕೆಲವೊಂದು ಸಲಹೆ–ಸೂಚನೆಗಳನ್ನು ಕೊಡುತ್ತಾರೆ, ಕೊಟ್ಟು ಆಶೀರ್ವದಿಸಿ ಹೊರಡುತ್ತಾರೆ.

**ರೇವಪ್ಪಯ್ಯನವರ ಜೀವಮಾನದ ಘಟನೆಗಳು**

೧) ಗಾಂಧೀಜಿ ಪೂರ್ವದಲ್ಲಿಯೇ ಅಸ್ಪೃಶ್ಯರ ಉದ್ಧಾರ: ಒಂದು ಸಲ ಸಂಚರಿಸುತ್ತ ರೇವಪ್ಪಯ್ಯನವರು ಭಾಲ್ಕಿಯ ಬಳಿಯ ಜಾಗೇಶ್ವರ (ಜಾಗೈ) ಗ್ರಾಮಕ್ಕೆ ತಲುಪಿದರು. ಮಟ ಮಟ ಮಧ್ಯಾಹ್ನದ ಹೊತ್ತು, ಊರಿನಲ್ಲಿ ವೀರಶೈವ ಬಂಧುಗಳ ಸ್ಥಿತಿವಂತರ ಮನೆಯಲ್ಲಿ ರೇವಪ್ಪಯ್ಯನವರ ಬಿನ್ನಹಕ್ಕೆ ಉದಾಸಿನವಾಯಿತು. ಇದನ್ನು ಕಂಡು ಸಮಾಧಾನ ಚಿತ್ತರಾಗಿ ಶರಣರು ಊರ ಹರಿಜನ ಕೇರಿ ಮೂಲಕ ಮುಂದಿನ ಗ್ರಾಮಕ್ಕೆ ನಡೆದರು. ಸ್ವಾತಂತ್ರ್ಯದ ಪೂರ್ವದಲ್ಲಿ ಹರಿಜನರ ಸ್ಥಿತಿ ಹೀನಾಯವಾಗಿತ್ತು. ಅವರನ್ನು ಊರ ಜನ ಮುಟ್ಟುತ್ತಿರಲಿಲ್ಲ. ಶರಣರು ಹರಿಜನ ಕೇರಿ ದಾಟಿ ಹೋಗುವದನ್ನು ಕಂಡು ಆ ಜನರು ತಾವು ಶರಣರಿಗೆ ಬಿನ್ನಹ ಕೊಡಲು ಮುಂದೆ ಬಂದರು. ಕೇರಿಗೆ ಕೇರಿಯೇ ತಳಿರುತೋರಣ ಹಾಕಿದರು. ರೇವಪ್ಪಯ್ಯನವರ ಭಕ್ತ ಸಮುದಾಯಕೆ ಸಾಕಗುವಷ್ಟು ದವಸಧಾನ್ಯಗಳನ್ನು ತತ್‌ಕ್ಷಣವೇ ತಂದೊಡ್ಡಿದರು. ಗುರುಲಿಂಗ ಜಂಗಮಾರ್ಚನೆ ಮುತ್ತೈದೆಯರ ಪೂಜೆಗೈದು ರೇವಪ್ಪಯ್ಯನವರು ಪ್ರಸಾದ ಸ್ವೀಕರಿಸಿದರು. ಹರಿಜನ ಕೇರಿಗೆ ಕೇರಿ ಶರಣರ ಚರಣಾಂಬುಜಕ್ಕೆ ಸಾಷ್ಟಾಂಗವೆರಗಿತು. ಅವರ ಭಕ್ತಿ, ಭಾವ, ಕೈಂಕರ್ಯಕ್ಕೆ ಶರಣರು ಮನದೂಗಿದವರು.

ಈ ಭಕ್ತ ಸೇವೆಗೆ ಸಂತಸಗೊಂಡ ಶರಣರು ಬಳಿಯ ಕರಿಕಲ್ಲನ್ನು ತರಿಸಿ ಒಂದು ಸ್ಥಳದಲ್ಲಿ ನೆಡುವಂತೆ ಆಜ್ಞಾಪಿಸಿದರು. ೪೫ ದಿವಸಗಳ ನಂತರ ಆ ಕಲ್ಲನ್ನು ಕಿತ್ತಿ ನೋಡಲು ಕಲ್ಲಿನ ಕೆಳಗೆ ಎಲ್ಲಿ ಅಗೆದರಲ್ಲಿ ವಿಭೂತಿಯೇ ಕಂಡಿತು. ಜನರು ಆ ಕಲ್ಲನ್ನು ಭಕ್ತಿಯಿಂದ ಅಲ್ಲಿಯೇ ನೆಟ್ಟರು. ಆ ದಿನದ ನೆನಪಿಗಾಗಿ ಇಂದಿಗೂ ಪ್ರತಿ ವರ್ಷ ಜಾಗೇಶ್ವರ ಹರಿಜನ ಭಕ್ತರು ಜಾತ್ರೋತ್ಸವಗೈದು ಅನ್ನ ಸಂತರ್ಪಣೆ ಭಜನೆ, ಕೀರ್ತನೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತ ಬರುತ್ತಿದ್ದಾರೆ. ಈಗ ಆ ಸ್ಥಳದ ಮೇಲೆ ರೇವಪ್ಪಯ್ಯನವರ ವೃತಮಾಡುತ್ತಾರೆ, ಪ್ರತಿವರ್ಷ ಭಜನೆ, ಕೀರ್ತನೆ, ನಾಟಕ, ದಾಸೋಹ, ಕಾರ್ಯಕ್ರಮ ನೇರವೇರಿಸುತ್ತ ಬರುತ್ತಿದ್ದಾರೆ. ಇದ್ದರಿಂದ ಅವರ ಜೀವನದಲ್ಲಿ ಸಿರಿಸಂಪತ್ತು ಪ್ರಾಪ್ತಿಯಾಗಿ ಸೌಖ್ಯ ನೆಲೆಯೂರಿದೆ. ಆ ಕೇರಿ ಇಂದೂ ಸಿರಿಜನರ ಕೇರಿಯಾಗಿ ವಿಜೃಂಬಿಸಿದೆ.

ಜಾಗೇಶ್ವರ ಹರಿಜನರೆಲ್ಲರೂ ರೇವಪ್ಪಯ್ಯನವರನ್ನು ಕೊಂಡಾಡುವರು ಅವರ ಹಿತೋಪದೇಶದ ಮೇರೆಗೆ ಪರೋಪಕಾರಮಯ ಜೀವನವನ್ನು ಸಾಗಿಸುತ್ತಿದ್ದಾರೆ. ಭಾಲ್ಕಿ ತಾಲೂಕಿನ ತರನಳ್ಳಿಯಲ್ಲಿ ಹರಿಜನರು ರೇವಪ್ಪಯ್ಯನವರನ್ನು ಭಜಿಸುತ್ತಾರೆ. ಒಂದಲ್ಲ ಎರಡಲ್ಲ ಇಂಥ ಇವರ ಉದಾಹರಣೆಗಳು ಹೇರಳವಾಗಿ ಲಭ್ಯವಾಗಿವೆ. ಗಾಂಧೀಜಿಯ ಪೂರ್ವದಲ್ಲಿಯೇ ದಕ್ಷಿಣ ಭಾರತದಲ್ಲಿ ಹರಿಜನರ ಉದ್ಧಾರಕ್ಕೆ ಪ್ರಯತ್ನಿಸಿದ ಜಂಗಮಯ್ಯ ರೇವಪ್ಪಯ್ಯನವರು ಎಂಬುದು ಇದ್ದರಿಂದ ಸ್ಪಷ್ಟವಾಗುತ್ತದೆ. ಮೇಲು ಕೀಳು ಇದು ಮಾನವ ಕಲ್ಪಿತವಾದದ್ದು ಯಾರನ್ನು ಹೀನಾಯವಾಗಿ ಕಾಣಬಾರದು ಎಂಬುದು ಶರಣರ ಹೇಳಿಕೆಯಾಗಿರದೆ ಅಕ್ಷರಾಂಶ ಆಚರಣೆಯಾಗಿತ್ತು. ಎಂಬುದು ಈ ಮೇಲಿನ ಘಟನೆಯಿಂದ ತಿಳಿಯುತ್ತದೆ.

೨) ಮಹಿಳಾ ಉದ್ಧಾರಕ್ಕೆ ನಾಂದಿ : ಹೆಣ್ಣನ್ನು ತಿಸರಸ್ಕರಿಸಿದ ಸಮಾಜ ಉನ್ನತಿಗೆ ಏರಲಾರದು "ಹೆಣ್ಣು ಮಾಯೆಯಲ್ಲ ಹೊನ್ನು ಮಾಯೆಯಲ್ಲ; ಮಣ್ಣು ಮಾಯೆಯಲ್ಲ" ಎಂದು ಪ್ರತಿಪಾದಿಸಿದ ಶರಣರು ಹೆಣ್ಣನ್ನು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನನೆಂಬ ದೃಷ್ಟಿಯಿಂದ ನೋಡಿದರು. ಇದು ವೀರಶೈವ ಲಿಂಗಾಯತ ಧರ್ಮ ಸಿದ್ಧಾಂತದ ವಿಶಿಷ್ಟ ಕೊಡುಗೆಯಾಗಿದೆ. ಹೆಣ್ಣು–ಗಂಡು ಸಂಸಾರ ಚಕ್ರದ ಎರಡು ಗಾಲಿಗಳಿದ್ದಂತೆ ಆದರೆ ಸಮಾಜದಲ್ಲಿ ಹೆಣ್ಣಿನ ಶೋಷಣೆ ನಡದೇ ಇದೆ. ಗಂಡಸೆಲ್ಲ ಹೆಣ್ಣನ್ನು ಸಮಾಜ ಕೆಂಗಣ್ಣಿನಿಂದ ನೋಡುತ್ತದೆ. ಮಹಿಳೆಗೆ ಪುನರ್ ವಿವಾಹದ ಅನುಮತಿ, ಸಮಾಜ ನೀಡಬೇಕಾದದು ನ್ಯಾಯೋಚಿತವಾಗಿದೆ. ಈ ನಿಯಮವನ್ನು ಕಲ್ಕತ್ತಾದ ಈಶ್ವರಚಂದ್ರ ವಿದ್ಯಾಸಾಗರ ಎತ್ತಿ ಹಿಡಿದು ಮಹಿಳಾ ಉದ್ಧಾರಕ್ಕೆ ದುಡಿದರು. ಗುರು ನಾನಕರು ವಿಧವಾ ವಿವಾಹಕ್ಕೆ ಮನ್ನಣೆಯಿತ್ತರು. ಲಿಂಗಾಯತ ಸಮಾಜದಲ್ಲಿ ಮನ್ನಣೆ ದೊರೆತುದನ್ನು ಗಮನಿಸಬಹುದು.

ನಾವದಗಿ ಗ್ರಾಮದಲ್ಲಿ ಒಬ್ಬ ಬ್ರಾಹ್ಮಣ ವಿಧವೆ ಬಸುರಿಯಾಗಿ ಶಿಶುವೊಂದಕ್ಕೆ ಜನ್ಮ ನೀಡುತ್ತಾಳೆ. ಕಂಡದ್ದಕ್ಕೂ ಮೂಗು ಮುರಿಯುವ ಬ್ರಾಹ್ಮಣ ಸಮಾಜ ಆ ಹೆಣ್ಣನ್ನು ಬಹಿಷ್ಕಾರಿಸಿದಾಗ ಆ ಮಹಿಳೆ ದಿಕ್ಕುಗಾಣದೆ ರೇವಪ್ಪಯ್ಯನವರ ಹತ್ತಿರ ಬಂದು ಮೊರೆ ಇಡುತ್ತಾಳೆ. "ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ" ಎಂಬ ಬಸವ ಸಂದೇಶದ ಮೇರೆಗೆ ಶರಣರು ಮಾನವ ಸಮಾಜೋತೆನ್ನತಿಯನ್ನು ಒಪ್ಪಿದವರಾಗಿದ್ದರು. ಬ್ರಾಹ್ಮಣ ವಿಧವೆಗೆ ತಕ್ಷಣ ಆಸರೆಯಿತ್ತು ಲಿಂಗ ದೀಕ್ಷೆ ನೀಡಿ ಹುಟ್ಟಿದ ಮಗುವಿಗೂ ಲಿಂಗಧಾರಣೆ ಮಾಡಿ ಶಿಶುವಿಗೆ ವೀರಬಸವಂತರಾಯನೆಂದು ನಾಮಕರಣ ಮಾಡುತ್ತಾರೆ. ಒಂದು ಸಮಾಜ ಬಹಿಷ್ಕರಿಸಿದ ಹೆಣ್ಣಿನ ಕಣ್ಣಿರನೊರೆಯಿಸಿ ಮಹಿಳಾ ಉದ್ಧಾರಕ್ಕೆ ಕರ್ನಾಟದಲ್ಲಿ ರೇವಪ್ಪಯ್ಯನವರು ಶ್ರೀಕಾರ ಹಾಕಿದರು.

೩) ಗುರು ಮುಟ್ಟಿ ಗುರುವಾದವನೆ ನಿಜಶರಣ:–ಗುರುಮುಟ್ಟಿ ಗುರುವಾಗೆ; ಅರುವಿನೊಳು ಅರುವಾಗೆ ನಿಜ ಶರಣರು ಗುರುವಿನ ಗುಲಾಮನಾಗಿ ಗುರುಪದವಿಯ ಹಂತಕ್ಕೆ ತಲುಪುತ್ತಾರೆ. ಅಂದ ಹಾಗೆ ಹರ ಪೂಜೆ ಗುರು ಸೇವೆ ವರಪುಣ್ಯವಿಲ್ಲದೆ! ಸುಮ್ಮನೆ ದೊರಕಿತೆನಾತ್ಮ! ಎಂದು ನಿಜಗುಣ ಶಿವಯೋಗಿಗಳು ಪ್ರಶ್ನಿಸಿದ್ದಾರೆ. ಶಿವನನ್ನು ಅರಿಯದವನು ಗುರುಸೇವೆ ಮಾಡಲಾರದ ಅಜ್ಞರಿಗೆ ಮುಕ್ತಿ ಸಾಧ್ಯವಿಲ್ಲ. ಅದು ಮಹಾ ಮಹಾಂತರರಿಗೆ ಒಲಿಯುವ ಮಾರ್ಗವೇ ಸರಿ. ಒಮ್ಮೆ ರೇವಪ್ಪಯ್ಯನವರ ಗುರುಗಳಾದ ಶ್ರೀ ಸಿದ್ಧಲಿಂಗೇಶ್ವರರು ಮಹಾರಾಷ್ಟ್ರದ ಮಹಾದೇವ ಬಾರ್ಷಿಯ ಮನೆಯೊಂದರಲ್ಲಿ ಭಕ್ತರ ಬಿನ್ನಹಕ್ಕಾಗಿ ಊರಿನಿಂದ ಪ್ರಯಾಣ ಬೆಳೆಸಿ ಕೆಲದಿನ ತಂಗಿದ್ದರು. ಒಂದುದಿನ ಹೋರಗಡೆ ಹೋಗಿ ಸಂಚರಿಸುತ್ತಿರುವಾಗ ನಾಗರ ಹಾವು ಅವರ ಕಾಲಿಗೆ ಕಚ್ಚಿತ್ತು. ಕೂಡಲೇ "ರೇವಪ್ಪಯ್ಯ" ಎಂದು ಕೂಗಿದರು. ಆವಾಗ ರೇವಪ್ಪಯ್ಯನವರು ನಾವದಗಿಯಲ್ಲಿ ಸ್ನಾನ ಮಾಡುತ್ತಿದ್ದರು. ಅಲ್ಲಿ ಕೂಗಿದ ತಕ್ಷಣ ರೇವಪ್ಪಯ್ಯನವರು ಇಂದಿನ ಪೂಜ್ಯ

ಪ್ರಸಾದ ರೇವಮ್ಮನವರಿಗೆ ಮುಗಿಸಲು ಹೇಳಿ ತಕ್ಷಣವೇ ಬಾರ್ಷಿಗೆ ಗುರುಗಳ ಕೂಗಿಗೆ ಹೊರಟಿಯೇ ಬಿಟ್ಟರು. ಅಲ್ಲಿ ಹೋಗಿ ಸಿದ್ಧಲಿಂಗರಿಗೆ ಭುಜದ ಮೇಲೆತ್ತಿಕೊಂಡು ಸ್ನಾನ ಮಾಡಿಸಿದರು. ಪೂಜಾವಿಧಾನಗಳನ್ನು ರೇವಪ್ಪಯ್ಯನವರೇ ತಿರಿಸಿದರು.

ಗುರು ಸಿದ್ಧಲಿಂಗೇಶ್ವರಿಗೆ ವಾಂತಿಯಾಗಲು ಆರಂಭಿಸಿತು. ಪೂಜ್ಯಯಲ್ಲಿ ಕುಳಿತ ಎದ್ದು ಹೋಗುವ ಹಾಗೆ ಇರಲಿಲ್ಲ ಕಾರಣ ಶರಣರಿಗೆ ಎಡೆಬಟ್ಟಲು ಮುಖದ ಹತ್ತಿ ಹಿಡಿ ಎಂದರು. ಪೂಜ್ಯರು ಎಡೆ ಬಟ್ಟಲನ್ನು ಮುಖದ ಹತ್ತಿರ ಹಿಡಿದರು ಗುರುಗಳ ಆರು ಸಲ ವಾಂತಿ ಮಾಡಿದರು. ಆ ವಾಂತಿಯನ್ನು ಸ್ವತಹ ಅಪ್ಪಗಳು ಗುರುಪ್ರಸಾದವೆಂದು ಸೇವಿಸಿದರು. ನಂತರ ಸಿದ್ಧಲಿಂಗರು ಗುಣಮುಖರಾದರು ಇಂತಹ ಗುರು ಶಿಷ್ಯರ ಮಹಿಮೆಯನ್ನು ವರ್ಣಿಸುವುದು ಅಸಾಧ್ಯ. ಅವರಿಬ್ಬರು ಒಡಗೂಡಿ ನಾವದಗಿಗೆ ಮರಳಿ ಬಂದರು. ನಾವದಗಿಯಲ್ಲಿ ಸಹಸ್ರ ಜಂಗಮಾರ್ಚನೆ ಕಾರ್ಯಕ್ರಮ ನೇರವೇರಿಸಿದರು. ಶಿವ ಮೆಚ್ಚಗೆಗೆ ಗುರುಸೇವೆ ಗುರು ಮೆಚ್ಚುಗೆಗೆ ಹರ ಸೇವೆಗೈದು ಧನ್ಯರಾದರು.

೪) ಅನಿಷ್ಟ ಪದ್ಧತಿಗೆ ಮಟ್ಟ :- ಲಿಂಗಾಯತ ಸಮಾಜದಲ್ಲಿ ಅನಿಷ್ಟ ಪದ್ಧತಿಗಳು ಬೇರು ಬಿಟ್ಟಿದವು. ಲಿಂಗವಂತರಲ್ಲಿ ಸಂಬಂಧವಿಲ್ಲದ ಕುರುಡಾಚರಣೆಗಳು ಅನುಸರಿಸಿ ಬಂದಿದ್ದವು. ಇಂಥ ಮೌಢ್ಯತನದ ದುರುಪಯೋಗ ಪಡಿಸಿಕೊಳ್ಳುವ ಸ್ವಾಮಿಗಳೇ ಈ ಸಮಾಜಕ್ಕೆ ಇಂದಿಗೂ ಕಂಟಕವಾಗಿದ್ದಾರೆ. ನೈಜ ಧರ್ಮದ ಬೀಜಕೊಬ್ಬರುಳಿದರು! ಎಂದು ಚೆನ್ನಬಸವಣ್ಣನವರ ಕಾಲಜ್ಞಾನದಲ್ಲಿ ಹೇಳಿದ ಮಾತು ಈಗ ಸತ್ಯವಾಗಿದೆ.

ಸ್ವಾಮಿಗಳೊಬ್ಬರು ಠಾಣಾಕೂಸನೂರಿನಲ್ಲಿ ಪುರಾಣ ಹೇಳುತ್ತಿದ್ದರು. ವೀರಶೈವರು ಸನಾತನಿಗಳಂತೆ ಜುಟ್ಟು ಬಿಡಬಹುದು, ಎಂದು ವರ್ಣಗಳಿಗೊಪ್ಪದ ಲಿಂಗವಂತರಲ್ಲಿ ವರ್ಣಾಶ್ರಮದ ಬೀಜ ಬಿತ್ತುತ್ತಿದ್ದರು. ಶರಣರು ಆಗ ಕೂಸನೂರಿನಲ್ಲೆ ಇದ್ದರು ಈ ಮಾತು ಅವರಿಗೆ ಬಿರಿಬಿಸಿಲಿನಂತೆ ಕಿವಿಯ ಮೇಲೆ ಬಂದೆರಗಿತು. ಅಣ್ಣನ ತತ್ವವನ್ನು ವಿರೋಧಿಸುವ ಮದಗಜಗಳಿಗೆ ಸಿಂಹ ಸ್ವಪ್ನವಾಗಿದ್ದ ರೇವಪ್ಪಯ್ಯನವರು ಎದ್ದು ಹೋಗಿ ಪುರಾಣ ಹೇಳುವ ಸ್ವಾಮಿಯ ಮುಂಗೈ ಹಿಡಿದರು. ವೀರಶೈವರು ಜೂಟ್ಟು ಬೀಡಬೇಕೆಂದು ಯಾವ ಗ್ರಂಥದಲ್ಲಿ ಬರೆದಿದೆ. ಈ ಮಾತಿನ ನಿರ್ಣಯ ಮಾಡಿ ಈ ಸ್ಥಳದಿಂದ ಹೋಗಬೇಕೆಂದು ಸುಮಾರು ಮೂರು ದಿನ ವಾದ ಹಾಕಿದರು. ಅನ್ನ ನೀರುಗಳಿಲ್ಲದೆ ಹಾಗೇಯೆ ಅವರು ಉಪವಾಸ ಕುಳಿತರು ಮತ್ತು ಪುರಾಣಿಕರನ್ನು ಕುಡಾ ಉಪವಾಸ ಕೂಡಿಸಿದರು. ಪರವೆಯಿಲ್ಲದೆ ಪುರಾಣಿಕರು ಕೊನೆಗೆ ಸೋಲ್ಲೊಪ್ಪಿದರು. ನಂತರ ಆ ಪುರಾಣಿಕರ ತಲೆಯ ಜೂಟ್ಟು ತೆಗೆಯಿಸಿದ ಮೇಲೆಯೇ ನಿತ್ಯ ಕ್ರಮಗಳನ್ನು ತೀರಿಸಿದರು. ಈ ರೀತಿಯ ಘಟನೆಗಳು ಇನ್ನೂ ಅನೇಕ ರೀತಿಯಲ್ಲಿ ಕಾಣ ಸಿಗುತ್ತವೆ. ಆದ್ದರಿಂದಲೇ ಹಠವಾದಿ ರೇವಪ್ಪಯ್ಯ ದಿಟ್ಟವಾದಿ ಧೀರ ಜಂಗಮ್ಮನೆಂದು ಜನ ಕರೆಯುತ್ತಿದ್ದರು.

೫) ಧರ್ಮಾಂಧರಿಂದ ಬಹಿಷ್ಕಾರ : "ಇವನಾರವ ಇವನಾರವ ಎನ್ನದೆ ಇವ!ನಮ್ಮವ ಇವ!ನಮ್ಮವ" ಎಂಬ ಬಸವಣ್ಣರ ವಚನದಂತೆ ಶರಣರು ಜಾತಿ, ಮತ, ಪಂಥವೆನ್ನದೆ ಎಲ್ಲರನ್ನು ಬಳಿಗೆ ಕರೆಯುತ್ತ ಬಿನ್ನಹ ಸ್ವೀಕರಿಸುವುದನ್ನು ಎಲ್ಲಾ ಜನಾಂಗದವರಿಗೆ ದೀಕ್ಷೆಯನ್ನು ಕೊಡುವುದನ್ನು ಕಂಡ ಲಿಂಗಾಯತ ಧರ್ಮದ ಸಂಪ್ರದಾಯಸ್ಥರು ಕಟುವಾಗಿ ವಿರೋಧಿಗಳಾದರು. ಸೋಲಾಪುರದ ನೀಲಗಾರ ಶರಣ ಭಕ್ತರಲ್ಲಿ ಭಿನ್ನಹಕ್ಕೆ ಹೋದಾಗ ಅವರ ಚಲುವಾದಿ ಗಂಟೆಯನ್ನು ಕಸಿದುಕೊಂಡು ಶರಣರಿಗೆ ಬಹಿಷ್ಕಾರ ಹಾಕಿದರು. ಕೇದಾರ ಮಠಾಧೀಶರಿಂದ ಬಹಿಷ್ಕಾರ ಪತ್ರ ಹೊರಡಿಸಿದರು. ಶರಣರು ಉಪವಾಸ ವೃತ ಕೈಕೊಂಡರು. ಏಳು ದಿವಸಗಳು ಕಳೆದವು ಸೋಲ್ಲಾಪುರ ಪಟ್ಟಣದಲ್ಲಿ ಭೂಕಂಪನ ಭಾಸವಾಯಿತು. ಶರಣರು ಕ್ರೋಧ ಕೆರಳಿತು ಜನರು ಕಕ್ಕಾ ಬಿಕ್ಕಿಯಾಗಿ ಶರಣರೆಡೆಗೆ ಧಾವಿಸಿದರು. ವಿಜಾಪೂರದಿಂದ ಚಲುವಾದಿಗಳನ್ನು ಕರೆಯಿಸಿ ನೇಮದಂತೆ ಪ್ರಸಾದ ಸೇವಿಸಿದರು. ಇವರ ವಿರೋಧಿಗಳು ಪಶ್ಚತ್ತಾಪ ಪಡಬೇಕಾಯಿತು.

೬) ಗುರು ಪೀಠಕ್ಕಿಂತಲೂ ವಿರಕ್ತವೇ ಮೇಲೆ : ದುಬಲಗುಂಡಿಯಲ್ಲಿ ಫತ್ತೇಪುರೆ ಶರಣಪ್ಪನವರು ಪ್ರತಿ ವರುಷ ಸಹಸ್ರಜಂಗಮಾರ್ಚನೆ ಮಾಡುವ ವಾಡಿಕೆ ಇತ್ತು. ಕರ್ನಾಟಕದ ಬಹುದೂರದಿಂದ ಗುರು-ವಿರಕ್ತರು ದುಬಲಗುಂಡಿಗೆ ಆಗಮಿಸುತ್ತಿದ್ದರು. ಒಂದು ಸಲ ಗುರು-ವಿರಕ್ತರಲ್ಲಿ ಗದ್ದಿಗೆ ಮೇಲೆ ಯಾರು ಕೂಡಬೇಕೆಂದು ಚರ್ಚೆನಡೆಯಿತು. ವಾದ ಬಗೆ ಹರಿಯದೆ ಹೋಯಿತು. ಎರಡೂ ಕಡೆಯವರು ನಾವೇ ಗದ್ದುಗೆಯ ಅಧಿಕಾರಿಗಳೆಂದು ಹೇಳುತ್ತಿದ್ದರು. ಪೂಜೆ ಪ್ರಸಾದಗಳೆಲ್ಲ ನಿಂತೇ ಹೊದವು. ಆಗ ಸರಿಯಾದ ಸಮಯಕ್ಕೆ ರೇವಪ್ಪಯ್ಯ ಶರಣರ ಆಗಮನವಾಯಿತು. ಎಲ್ಲರ ಮುಖದ ಮೇಲೆ ಕಳೆ ಬಂತು ನಿರ್ಣಯ ಕೂಡಲು ಶರಣರಿಗೆ ಬಿಟ್ಟರು. ಆಗ ಇವರು ಗುರು-ವಿರಕ್ತರೆಂದರೆ ಸಮಾಜಕ್ಕೆ ತಾಯಿ-ತಂದೆ ಇದ್ದಂತೆ. ಸಮಾಜಕ್ಕೆ ಇವರಿಬ್ಬರ ಅವಶ್ಯಕತೆ ಬೇಕೆ ಬೇಕು. ಗಂಡ ಎದರು ಇದ್ದಾಗ ಹೆಂಡತಿಯ ಅಧಿಕಾರ ನಡೆಯಲಾರದು, ಗಂಡನೇ ಜವಾಬ್ದಾರಿನಾಗುತ್ತಾನೆ. ಇದರಂತೆಯೇ ತಂದೆ ಸ್ವರೂಪಿಯರಾದ ವಿರಕ್ತರೇ ಪೀಠಾಧಿಕಾರಿಗಳಾಗಲು ಸಮರ್ಥರು ಎಂದು ಹೇಳಿದರು. ಇವರ ಹೇಳಿಕೆಯಿಂದ ಜಗಳ ಬಗೆ ಹರಿಯಿತು. ಕೊಡಂಗಲ್ (ಆಂಧ್ರಪ್ರದೇಶ) ಕೆಂಪಿನ ಸಮಯದ ವಿರುಪಾಕ್ಷನಂದ ಸ್ವಾಮಿಗಳು ಗದ್ದುಗೆಯ ಅಧಿಕಾರಿಗಳಾದರು. ಈ ನಿರ್ಣಯವನ್ನು ದಿಕ್ಕರಿಸಿ ಕೇಸರ ಜಾವಳಗಿ ಸ್ವಾಮಿಗಳು ಹೋದರು. ಆದರೆ ದುರ್ದೈವದಿಂದ ಮಾರ್ಗ ಮಧ್ಯದಲ್ಲಿ ಹಾವು ಕಡಿದು ಪ್ರಾಣಬಿಟ್ಟರು. ಇದು ನಡೆದ ಘಟನೆ ಆಗಿದೆ.

೭) ಮುಸ್ಲಿಂ ಭಕ್ತರಿಗೂ ಲಿಂಗ ದೀಕ್ಷೆ : ರೇವಪ್ಪಯ್ಯನವರು ಬಿಜಾಪೂರ ಜಿಲ್ಲೆಯ ಸಿಂಧಗಿ ತಾಲೂಕಿನ ಚಾಂದಕವಟೆ ಗ್ರಾಮದಲ್ಲಿ ಭಕ್ತರ ಮನೆಯಲ್ಲಿ ಬಿನ್ನಹಕ್ಕೆ ಬಂದಿರುತ್ತಾರೆ. ಅಲ್ಲಿಯ ಮುಸ್ಲಿಂ ಸಮುದಾಯದ ಹಾಸಿಮ್ ಪಟೇಲ ಚಟರ್ಕಿ ಎಂಬುವನು ಶರಣ ಅಡಿದಾವರೆಗೆರಗಿ ತನಗೆ ದೀಕ್ಷೆ ನೀಡಬೇಕೆಂದು ಬಿನ್ನವಿಸಿದನು ಅವನ ನಿಷ್ಠೆಯನ್ನು ಸರಳ ನಡೆನುಡಿಯನ್ನು ಮೆಚ್ಚಿ ಆತನಿಗೆ ಮೃತ್ಯುಂಜಯ ಎಂಬ ಹೊಸ ಹೆಸರನ್ನು ನೀಡಿ ಲಿಂಗದೀಕ್ಷೆಯನ್ನು ನೀಡಿದರು. ಇನ್ನೊಂದು ಘಟನೆ ಬೀದರ ಜಿಲ್ಲೆಯ ಬೀದರ ತಾಲೂಕಿಗೆ ಸೇರಿದ ಕೊಳಾರ (ಬಿ) ಗ್ರಾಮದಲ್ಲಿ ಮಹಬೂಬ ಸಾಬನಿಗೆ ಲಿಂಗದೀಕ್ಷೆಯನ್ನಿತ್ತು ಮಹಾನಂದ ಪ್ರಭು ಎಂದು ಶರಣರು ಹೆಸರನ್ನಿತ್ತರು. ಇನ್ನೋಬ ಶ್ರೇಷ್ಠ ಭಕ್ತನಾದ ಜ್ಯಾಂತಿ ಇಮಾಮ ಸಾಹೇಬನನ್ನು ದೀಕ್ಷೆ ನೀಡಿ ಸದಾನಂದ ಮಹಾರಾಜನೆಂದು ಮರುನಾಮಕರಣ ಮಾಡಿದ್ದಾರೆ. ಹಾಗೂ ಬೋರ್ಗಿಯ

ರಹಿಮಾನ ಸಾಬ, ಮದ್ದಿನವಾಡಿ ಅಜೀಜ ಪಟೇಲ ಭಕ್ತರನ್ನಾಗಿ ಮಾಡಿದ್ದಾರೆ. ನಿಷ್ಠೆಯಿಂದ ತನ್ನ ಬಳಿಗೆ ಬಂದು ಬಿನ್ನಹವಿಸುವರೆಗೆ ಜಾತಿ, ಮತ, ಕುಲಗೋತ್ರ, ಎಣಿಸದೆ ರೇವಪ್ಪಯ್ಯನವರು ದೀಕ್ಷೆ ನೀಡಿ ಉದ್ಧರಿಸುತ್ತಿದ್ದರು. "ಶ್ವಪಚನಾಗದೇನು ಲಿಂಗ ಭಕ್ತನೇ ಕುಲಜರು" ಎಂಬ ಬಸವಣ್ಣರ ವಚನಕ್ಕೆ ಸಾಕ್ಷಿಯಾಗಿ ರೇವಪ್ಪಯ್ಯರು ಆಚರಿಸಿ ಶಿವಧರ್ಮದ ಜ್ಯೋತಿ ಬೆಳಗಿಸಿದರು. ಉಪಚಾರದ ಧರ್ಮ ಸೌಹಾರ್ದತೆಯನ್ನು ಮೀರಿ ಇವ!ನಮ್ಮವ ಇವ!ನಮ್ಮವ ಎಂದು ಶರಣರ ನಡೆ-ನುಡಿಗಳು ಎಲ್ಲರ ಅಚ್ಚು ಮೆಚ್ಚುಗೆಗೆ ಪಾತ್ರವಾದವು. ಹಿಂದು-ಮುಸ್ಲಿಂ ಬಾಂಧವ್ಯದ ಬೆಸುಗೆಗೆ ಇದು ಮಾದರಿಯಾಗಿದೆ.

ಈ ಮೇಲೆ ಹೇಳಿದ ಈ ನಾಲ್ಕು ಜನ ಮುಸಲ್ಮಾನರ ಸ್ಮಾರಕಗಳು ಇಂದಿಗೂ ನೋಡಲು ಸಿಗುತ್ತವೆ. ಒಂದು ಚಾಂದಕವಠೆಯ ಹಾಸೀಮ ಪಟೇಲ ಚಟರ್ಕಿ (ಮೃತ್ಯುಂಜಯ) ಯವರ ಗಣಿಹಾರದಲ್ಲಿ ಮೌನೇಶ್ವರ ಮಠದಲ್ಲಿ ಮಜಾರ ಅಂದರೆ ಹಿಂದೂ-ಮುಸಲ್ಮಾನರ ಭಾವೈಕ್ಯದ ಕುರುವು ನೋಡಲು ಸಿಗುತ್ತದೆ. ಇನೊಂದು ಕೋಳಾರ ಮಹಿಬೂಬ ಸಾಬ ಅವರ ಗದ್ದುಗೆ ವೀರಶೈವ ಲಿಂಗಾಯತದ ಪ್ರಕಾರ ಸ್ಮಾರಕ ನಿರ್ಮಾಣಗೊಂಡಿದೆ. ಜಾಂತಿ ಇಮಾಮ ಸಾಹೇಬರ (ಸದಾನಂದ ಮಹಾರಾಜರ) ಗದ್ದುಗೆ ಸಿದ್ದೇಶ್ವರ ಮಂದೀರದ ಆವರಣದಲ್ಲಿ ಇದೆ. ಅವು ನಮ್ಮಗೆ ನೋಡಲು ಸಿಗುತ್ತವೆ.

೮) ಶರಣರ ಭವಿಷ್ಯವಾಣಿಗಳು :

- ಶರಣರು ಅರಸರಿಂದ ಹಿಡಿದು ಶ್ರೀಸಾಮಾನ್ಯನವರೆಗೆ ಬಿನ್ನಹವನ್ನು ಸ್ವೀಕರಿಸಿದರು. ಹೈದ್ರಾಬಾದ ಪ್ರಾಂತ್ಯದಲ್ಲಿ ಶರಣರು ಸಂಚರಿಸುವಾಗ ಅಂದಿನ ಆಳರಸನಾದ ನಿಜಾಮ ಉಸ್ಮಾನ ಅಲಿ ಶರಣರಿಗೆ ಆಮಂತ್ರಿಸಿ ಸಾಷ್ಟಾಂಗವೆರಗಿ ಸಹಸ್ರ ಜಂಗಮಾರ್ಚನೆ ಮಾಡಿಸಿದನು. ನಂತರ ತನ್ನ ರಾಜ್ಯದ ಬಗ್ಗೆ ಭವಿಷ್ಯ ಹೇಳಬೇಕೆಂದು ಶರಣರಲ್ಲಿ ಬಿನ್ನವಿಸಿದನು. ಆಗ ಶರಣರು ನಿನ್ನ ಹಡಗಿಗೆ ತೂತು ಬಿದ್ದಿದೆ ಅದು ಬೇಗ ಮುಳುಗುವುದು ಎಂದು ಹೇಳಿದರು. ಹೈದ್ರಾಬಾದದ ಅಂದಿನ ವಜೀರ (ದಿವಾನ) ರಾಗಿದ್ದ ಕಿಶನ್ ಪ್ರಸಾದರು ಶರಣರಿಗೆ ಗೌರವಿಸುತ್ತಿದ್ದರು. ಬಿನ್ನಹವಿತ್ತು ಶರಣರಿಗೆ ಅನೇಕಬಾರಿ ಆಮಂತ್ರಿಸಿದರು.
- ಈಗೀನ ನಾರಾಯಣ ಖೇಡ ತಾಲೂಕಿನ ಕಲ್ಲೇರ ಮಂಡಲ ನಲ್ಲವಾಗು ಡ್ಯಾಂ ಕುರಿತು ೧೨೫ ವರ್ಷಗಳ ಹಿಂದೆ ಹೇಳಿರುವ ಮಾತು ಇಂದು ಸತ್ಯವಾಗಿ ಜನಜನಿತವಾಗಿದೆ. ಸುಲ್ತಾನಾಬಾದ ಗ್ರಾಮದ ಘಾಳಯ್ಯ ಪಟವಾರಿ ಎಂಬ ಭಕ್ತನ ಮನೆಯಲ್ಲಿ ಬಿನ್ನಹ ತೀರಿಸಿಕೊಂಡು ನಲ್ಲವಾಗುವಿನಿಂದ ಬರುವ ಸಂದರ್ಭದಲ್ಲಿ (ಕರೆಹಳ್ಳ) ನಲ್ಲವಾಗುವಿನಲ್ಲಿ ಸ್ನಾನಗೈದು ಲಿಂಗಾರ್ಚನೆ ಮಾಡಿಕೊಂಡು ಭಕ್ತರನುದ್ದೇಶಿಸಿ "ಇಲ್ಲಿ ದೊಡ್ಡ ನೀರಿನ ಆಣೆಕಟ್ಟು ನಿರ್ಮಾಣ ಆಗ್ತಾದ! ಈ ಪ್ರದೇಶ ಸಂಪದ್ಭರಿತ ತಾಣ ಆಗಿ ನಿಲ್ಲತಾದ!! ದೊಡ್ಡ ಬಸ್ತಿ ಆಗತಾದ!!!" ಎಂದು ಹೇಳಿದಾಗ ಅಲ್ಲಿನ ಪರಿಸ್ಥಿತಿ ತುಂಬಾ ಹೀನಾಯಮಾನವಾಗಿತ್ತು. ಈ ಮಾತು ನಂಬಲಾರ್ಹ ವಿಷಯವಾಗಿತ್ತು. ಇದು ರೇವಪ್ಪಯ್ಯನವರ ಕಾಲಜ್ಞಾನದ ಮಾತು ಇಂದಿನ ಕಾಲದಲ್ಲಿ ಸತ್ಯವಾಗಿ ಎಲ್ಲರ ಸ್ಮರಣೆಯಲ್ಲಿ ಮನೆಮಾತಾಗಿ ಬಿಟ್ಟಿದೆ.
- ಜಹೀರಾಬಾದ ತಾಲೂಕು ಮಂಡಲ ಆಧೀನದಲ್ಲಿ ಬರುವ ಕೊತ್ತುರು ಸಕ್ಕರೆ ಕಾರಖಾನೆ ಬಗ್ಗೆ ೮೦ ವರ್ಷಗಳ ಪೂರ್ವದಲ್ಲಿ ಝರಾ ಸಂಗಮಕ್ಕೆ ಹೋಗುವ ಸಂದರ್ಭದಲ್ಲಿ ಶರಣರು "ಇಲ್ಲಿ ದೊಡ್ಡದೊಂದು ಸಕ್ರಿ ಕಾರಖಾನಿ ನಿರ್ಮಾಣ ಆಗತಾದ ಸಾವಿರಾರು ಜನ್ರು ಕೆಲಸ ಮಾಡ್ತಾರ ನೆನಪಿಟ್ಟುಕೊಳ್ಳಿ" ಎಂದು ಹೇಳಿದ್ದಾರೆ. ಈ ಸಂಗತಿ ಭೂಚನಳ್ಳಿ ಸ್ವಾಮಿಗಳು ತಿಳಿಸಿದ್ದಾರೆ.
- ಒಂದು ಸಲ ನಾವದಗಿಯಲ್ಲಿ ಧುನಿ ಹತ್ತಿರ ಕುಳಿತುಕೊಂಡು ಮೈ ಕಾಸಿಕೊಳ್ಳುತ್ತಿರುವಾಗ ಕೆಲ ಭಕ್ತರು ಶರಣರನ್ನು ಗಾಂಧೀಜಿಯವರು ಭಾರತ ಸ್ವಾತಂತ್ರ್ಯಕ್ಕಾಗಿ ಚಳವಳಿ ನಡಸ್ಯಾರ ಇದು ಎಂದ ಆಗಬೇಕಪ್ಪ ಎಂದು ಭಕ್ತರು ಕೇಳಿದಾಗ "ಸಮೀಪ ಬಂದಿದೆ ಸ್ವತಂತ್ರವೇನೊ ಆಗ್ತಾದ ಆದ್ರ ಅತಂತ್ರ ಸ್ಥಿತಿ ನಿರ್ಮಾಣ ಆಗ್ತದ "ಯಾಕಂದ್ರ ಈ ಮಹಾತ್ಮರು ನಾರದ ವಂಶದವನಾಗಿರುವದರಿಂದ ಭಾರತ ಒಡೆದು ಎರ್ಡು ಹೋಳ ಆಗ್ತದ" ಮುಸಲ್ಮಾನ್ರು ತುಕಡಿ ರಾಜಕಿ ಮಾಡ್ತಾರ! ಮುಂದ ಕಾಲ ಕಾಲಕ್ಕೆ ರಕ್ತ ಹರಿತಾನೇ ಇರ್ತಾದ! ಪ್ರಪಂಚದ ಮೂರನೇ ಮಹಾಯುದ್ಧ ಆದಾಗ ಭಾರತ ಅಖಂಡ ದೇಶ ಆಗಿ ಇಡೀ ಜಗತ್ತು ತನ್ನ ಸ್ವಾಧೀನ ಮಾಡಕೊಳ್ಳತಾದ" ಎಂದು ಹೇಳಿರುವುದನ್ನು ಗುರಯ್ಯ ಮುತ್ಯಾ ಆಲೂರು ಅವರು ತಿಳಿಸಿದ್ದಾರೆ.
- ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಯಾನಾಗುಂದಿ ಗ್ರಾಮದ ಬಸವಲಿಂಗಪ್ಪ ತೇಲಿ ಎಂಬ ಶಿಷ್ಯನಿಗೆ ಸಿದ್ದೇಶ್ವರ ಬೆಟ್ಟದ ಕುರಿತು ಹೇಳಿದ ಭವಿಷ್ಯವಾಣಿ "ಇಲ್ಲಿ ಅಂದ್ರ ನಿಮ್ಮೂರ ಸಿದ್ದೇಶ್ವರ ಗುಡ್ಡ ಮಾಣಿಕಗಿರಿ ಆಗ್ತಾದ ಒಬ್ಬ ತಾಯಿ ಬಂದು ಈ ಗುಡ್ಡದ ಮ್ಯಾಲ ನಿವಾಸ ಮಾಡ್ತಾರ 'ಆ ಅವ್ವ ಸಾಕ್ಷಾತ ಪರಮಾತ್ಮನ ಅರ್ಧಾಂಗಿಯೇ ಪಾರ್ವತಿ' ಅವತಾರ ತೊಟ್ಟು ಬರ್ತಾಳ ಲಕ್ಷ ಲಕ್ಷ ಜನ ಇಲ್ಲಿ ಸೇರತಾರ !!" ಎಂದು ಹೇಳಿದಾರೆ.
- ಭಾಲ್ಕಿಯ ಸುತ್ತಲಿನ ಪ್ರದೇಶದಲ್ಲಿ ಶರಣರು ಸಂಚಾರ ಗೈಯುತ್ತಿದ್ದಾಗ ಇಂದಿನ ನ್ಯೂಗಂಜ ಆದ ಸ್ಥಳದಲ್ಲಿ ಶರಣರು ಸ್ವಲ್ಪ ಹೊತ್ತು ವಿಶ್ರಮಿಸಿ ಸ್ಥಳ ಪೂಜೆ ಸಲ್ಲಿಸಿ ಇಲ್ಲಿ ಮುಂದೆ ಲಕ್ಷ್ಮೀಯು ಮೆಟ್ಟನಾಲಿಗೆಯ ಮೇಲೆ ನಿಂತು ಸಂಪತ್ತನ್ನು ತೂರುವಳು ಎಂದು ಭವಿಷ್ಯ ನುಡಿದಿದ್ದರು. ಇತ್ತಿಚೆಗೆ ಆ ಸ್ಥಳದಲ್ಲಿ ನಾಗಲಿಂಗ ಕವಿಗಳು ರೇವಪ್ಪಯ್ಯನವರ ಸ್ಮಾರಕ ಸ್ಥಾಪಿಸಿ, ಅಪ್ಪನವರ ಮೂರ್ತಿ ಪ್ರತಿಸ್ಥಾಪನೆ ಮಾಡಿ, ರೇವಪ್ಪಯ್ಯ ಗಂಜ ಎಂದು ನಾಮಕರಣ ಮಾಡಿದ್ದಾರೆ. ಈ ಸಂದರ್ಭದಲ್ಲಿ ಗಂಜಿನ ವ್ಯಾಪಾರಸ್ಥರಾದ ಮಾಣಿಕಪ್ಪ ಜಾಂತಿ, ಕಾಶಪ್ಪ ಬಳತ, ಶರಣಪ್ಪ ಬಕ್ಕಾ ಮುಂತಾದವರು ಜೋತೆಯಲ್ಲಿದ್ದರು. ಆ ಸ್ಥಳಕ್ಕೆ ನ್ಯೂ ರೇವಪ್ಪಯ್ಯ ಗಂಜ ಎಂದು ಹೆಸರಿಸಿ ಶರಣರಿಗೆ ಭಕ್ತಿ ಗೌರವ ಸಲ್ಲಿಸಿದ್ದನ್ನು ಕಾಣಬಹುದು. ಆ ಸ್ಥಳದಲ್ಲೇ ನ್ಯೂ ರೇವಪ್ಪಯ್ಯ ಗಂಜ್ ಉದಯಿಸಿದೆ.
- ಕಲ್ಯಾಣ ಮಾರ್ಗದಿಂದ ಕಲಬುರಗಿಗೆ ರೈಲು ಹಾದು ಹೋಗುವುದೆಂದು ಅಪ್ಪಗಳು ಭವಿಷ್ಯ ನುಡಿದಿದ್ದಾರೆ. ಅದು ಇಂದಿನ ಕಾಲದಲ್ಲಿ ಸತ್ಯವಾಗಿದೆ. ಅಪ್ಪಗಳು ತಮ್ಮ ಜೀವಿತಕಾಲದಲ್ಲಿ ಬಸವ ಕಲ್ಯಾಣಕ್ಕೆ ಹೋಗಲಿಲ್ಲ. ಅಪ್ಪ ಅಲ್ಲಿ ಆ ಊರಿನ ಸೀಮೆಗೂ ತಾಗಲಿಲ್ಲ. ಅನೇಕ ಭಕ್ತರು ಏನಾದರೂ ಮಾಡಿ ಕಲ್ಯಾಣಕ್ಕೆ ಕರೆದೊಯ್ಯಬೇಕೆಂಬ ಲವಲವಿಕೆಯಿಂದ ಸೀಮೆಯ ಸಮೀಪ ಹಾಯುತ್ತಿರುವಾಗಲೇ ಅಪ್ಪಗಳು ಇದು ಯಾವುದು ಸೀಮೆ ಎಂದು ಕೇಳುತ್ತಿದ್ದರು. ಕಲ್ಯಾಣ ಸೀಮೆ ಎಂದಾಗ ಅನೇಕ ಸಲ ಬೈಗಳು ಉಂಡಿದ್ದುಂಟು. ಕಲ್ಯಾಣದ

ಭಕ್ತಾದಿಗಳು ಬಿನ್ನಹ ನೀಡಲು ಬಂದರೆ ನಿರಾಕರಿಸುತ್ತಿದ್ದರು. ಇದಕ್ಕೆ ಕಾರಣ ಅಪ್ಪ ಹೇಳಿದ್ದಾರೆ "ಬಸವ ಕಲ್ಯಾಣವು ರಕ್ತಸಿಕ್ತವಾಗಿರುವ ತಾಣವಾಗಿದೆ ಶರಣರ ರಕ್ತ ಹರಿದಿದೆ, ಕಲ್ಯಾಣ ಪುನಃ ಕಟ್ಟಬೇಕಾಗಿದೆ. ಅದ್ಕ ಈ ಜನ್ಮದಾಗ ಕಲ್ಯಾಣಕ್ಕ ಬರ್ಲಾಕ ಮಹಾ ಗುರುವಿನ ಪರವಾಣಗಿ ಇಲ್ಲ. ಅದಕ್ಕಾಗಿ ಬರೋದಿಲ್ಲ ಎಂದು ಹೇಳಿದ್ದಾರೆ. ಭಕ್ತರು ಅದು ಯಾವಾಗ ಬರುವಿರಿ ಎಂದು ಭಕ್ತರು ಕೇಳಿದಾಗ ಹರಿದಾರಿಗೆ ಒಂದು ಬಜಾರ! ನಾಕ ಹರಿದಾರಿಗಿ ಒಂದೀಪ ಆಗ್ತಾದ ಆ ಸಂದರ್ಭದಾಗ ಬಸವಕಲ್ಯಾಣ ಹೊಸ ರೈಲು ರಸ್ತಾ ನಿರ್ಮಾಣ ಆಗತಾದ, ಆವಾಗ ಆ ಹೊಸ ರೇಲಿನ ಹಿಂದಿನ ಡಬ್ಬಿದಾಗ ಕೈಯಾಗ ಹಸಿರು ಕೆಂಪು ಝುಂಡಾ ಮೈಮ್ಯಾಲ ಬಿಳಿ ಬಟ್ಟೆ ಹಣಿಮ್ಯಾಲ ಹಸುರು ಅಡ್ಡ ನಿಶಾನಿ ಇರ್ತಾದ, ಆ ವ್ಯಾಳ್ಯಾದಾಗ ಇಂವ ಈ ಅಯ್ಯ ಬರ್ತಾನ ಒಬ್ಬನೇ ಅಲ್ಲ ಬಸವಾದಿ ಶರಣ್ರು ರೇಲಿನಾಗ ಬರ್ತಾರ, ಕಲ್ಯಾಣ ಆವಾಗ ನಿರ್ಮಾಣ ಆಗ್ತದ ದಯಾಮಾಡಿ ನನ್ನ ಕಲ್ಯಾಣ ಬರ್ಲಾಕ ವತ್ತಾಯ ಮಾಡಬೇಡಿ" ಎಂದು ಹೇಳಿದ್ದಾರೆ. ಈ ಮಾತು ನಾವಲಿಂಗಪೂರ (ನಾವದಗಿ) ಊರಿನ ಗಣ್ಯರು ಹಾಗೂ ಇತರರು ಹೇಳಿದ್ದಾರೆ.

ಹೀಗೆ ಇನ್ನೂ ಅನೇಕ ವಿಷಯಗಳ ಬಗ್ಗೆ ಕಾಲಜ್ಞಾನ ಹೇಳಿದ್ದಾರೆ ಸುರ್ ಸುರ್ ಬತ್ತಿ ಸುರಂಗ ಬತ್ತಿ ನಾಡಿಗೆಲ್ಲ ಒಂದೇ ಬತ್ತಿ ಆಗ್ತಾದ ಎಂಬುದು ಲೈಟಿನ ಕುರಿತು ಹೇಳಿದ್ದುಂಟು.

- ಒಂದು ಸಲ ಈಗೀನ ನೀಲಂಗಾ ತಾಲೂಕಿನ ಶಹಾಜಾನಿ ಔರಾದ ಗ್ರಾಮದ ವಿರುಪಾಕ್ಷೇಶ್ವರ ಮಠದಲ್ಲಿ ಧರ್ಮ ಸಂಚಾರದ ಬೀಡು ಬಿಟ್ಟಿದ್ದರು. ಅಲ್ಲಿ ಅನೇಕ ಭಕ್ತಾದಿಗಳನ್ನು ಧರ್ಮೋಪದೇಶ ನೀಡುತ್ತಿರುವಾಗ ಸಂಗಪ್ಪ ಆಗರೆ ಎಂಬ ಭಕ್ತನ ಮಗಳಾದ ಲಕ್ಷ್ಮೀಬಾಯಿ ಆಟ ಆಡುತ್ತಿದ್ದಳು. ಆ ಸಮಯದಲ್ಲಿ ಹೆಣ್ಣು ಮಗುವಿನ ವಯಸ್ಸು ೬-೭ ವರ್ಷ ಇದ್ದಿರಬಹುದು. ಆಟ ಆಡುತ್ತಿರುವ ಲಕ್ಷ್ಮೀಯ ಮೇಲೆ ಶರಣರ ಗಮನ ಸೆಳೆಯಿತು. ಆಗ ಶರಣರು ಅಲ್ಲಿ ಆಡುತ್ತಿರುವ ಹೆಣ್ಣು ಮಗು ಯಾರದು? ಎಂದು ಕೇಳಿ ಆ ಮಗುವನ್ನು ಹತ್ತಿರ ಕರೆದು ಮುದ್ದಾಡಿ, ಭಕ್ತರನ್ನುದ್ದೇಶಿಸಿ ಮಗುವಿನ ಭವಿಷ್ಯದ ಬಗ್ಗೆ ಹೇಳಿದ್ದಾರೆ ಈ ಮಗುವಿಗೆ ಹದಿನಾರು ಮಕ್ಕಳಾಗುವವು!! ಅವುಗಳಲ್ಲಿ ಮೂರು ಮಕ್ಕಳು ಧರ್ಮ ವಂತರಾಗಿ ಹೆಸರು ವಾಸಿಯಾಗುವರು. ನನ್ನ ಝುಂಡಾ ದಶ ದಿಕ್ಕುಗಳಲ್ಲಿ ಮೆರೆಸುವರು!!! ಕೆಲವರು ಈ ಪ್ರಶ್ನೆಗೆ ಪ್ರತಿಯಾಗಿ ನಿಮ್ಮ ವಂಶಜರು ಮೆರೆಸುವುದಿಲ್ಲವೇನು ಅಪ್ಪಾವ್ರೇ? ಎಂದು ಕೇಳಿದಾಗ ಅವ್ರು ಬಬಲಿ (ಜಾಲಿ) ಮುಳ್ಳಿನಂತೆ ಬೆಳಿತಾವ ಎಂದು ಹೇಳಿದರು. ಇವಳಿಂದ ಜನಿಸುವ ಮಕ್ಕಳು ನನ್ನ ಖಾಸಾ ಮಕ್ಕಳು, ನನ್ನ ಅಭಿಮಾನ ಅವ್ರಿಗಿ ಬರ್ತದ ತನು, ಧನ ಬೆಳಿತಾವ ಎಂದು ಆ ಮಗುವಿನ ಭಕ್ತಾಂಶ ಹೆಚ್ಚಾಗಿ ಬೆಳಿತಾದ ಎಂದು ಆ ಮಗುವಿನ ತಲೆಯ ಮೇಲೆ ಕೈ ಯಾಡಿಸಿ ಒಂದೇ ಸವನೆ ನಕ್ಕರೆಂದು ತಿಳಿದು ಬಂದಿದೆ. ಅಪ್ಪಗಳು ಹೇಳಿದ ಭವಿಷ್ಯದ ವ್ಯಕ್ತಿಗಳಾರೆಂದರೆ (ನಾವದಗಿ ಗದಿಗೆಪ್ಪ ಗೌಡರ ಮಕ್ಕಳಾದ ಬಸವರಾಜ, ಸಾಧು ಸಿದ್ಧರಾಮ, ಲಿಂಗರಾಜೇಶ್ವರ ಅಥವಾ ನಾಗಲಿಂಗ ಕವಿ) ಇವರೇ ಲಕ್ಷ್ಮೀಬಾಯಿಯ ಮೂವರು ಮಕ್ಕಳು.

ಹೀಗೆ ರೇವಪ್ಪಯ್ಯನವರು ಭವಿಷ್ಯವಾಣಿಗಳು ಇನ್ನೂ ಅನೇಕ ಸಿಗುತ್ತವೆ. ಅವು ಮುಂದಿನ ಅಧ್ಯಯನದಲ್ಲಿ ಅಂದರೆ ರೇವಪ್ಪಯ್ಯನವರ ಬಗೆಗಿನ ಶಿಷ್ಟಾಸಾಹಿತ್ಯಧ್ಯಯನದಲ್ಲಿ ಚರ್ಚಿಸುತ್ತೇನೆ. ಅಪ್ಪನವರು ಪಾದವಿಟ್ಟ ಸ್ಥಳಗಳು ಇಂದು ಸುಕ್ಷೇತ್ರಗಳಾಗಿ ವಿಜೃಂಭಿಸಿವೆ. ಕಲಬುರಗಿಯ ಶರಣಬಸವೇಶ್ವರರಂತೆ ಅನೇಕ ಜನರಿಗೆ ಸಂತಾನ ಭಾಗ್ಯ ಕರುಣಿಸಿದ್ದಾರೆ. ಹಸಿದವರಿಗೆ ಅನ್ನಕೊಟ್ಟು ಅನ್ನದಾಸೋಹಿಯಾಗಿದ್ದಾರೆ. ಬಳಲಿ ಬಂದವರಿಗೆ ಆಶ್ರಯಕೊಟ್ಟು ಮಹಾದಾನಿಯಾಗಿದರು, ಕೊಡುವರುಂಟು ಬೇಡುವರಿಲ್ಲವೇನ್ನುವಂತೆ ಪ್ರತಿನಿತ್ಯ ಡಂಗೂರು ಸಾರಿ ದಾನ ನೀಡುತ್ತಿದ್ದರು. ಈ ತೇರನಾಗಿ ಸುಮಾರು ೭೦ ವರುಷಗಳವರೆಗೆ ಡಂಗೂರ ಸಾರಿ ದಾನ ನೀಡಿದ್ದಾರೆ.

**ಮಹಾ ಬಯಲಿನಲ್ಲಿ ಬಯಲಾಯಿತು ಶರಣ ಚೈತನ್ಯ :**

ರೇವಪ್ಪಯ್ಯ ಶಿವಶರಣರು ಜ್ವರ ಬಂದರೂ ಎಂದೂ ಔಷಧಿ ಸೇವಿಸಿದವರಲ್ಲ. ಭತ್ತದ ಹುಲ್ಲಿನ ಹಾಸುಗೆ ಮೇಲೆ ಜ್ವರ ತಾಪ ಕಡಿಮೆಯಾಗಲು ಅವರು ವಿರಮೀಸುತ್ತಿದ್ದರು ಇಳಿವಯಸ್ಸಿನಲ್ಲಿ ಅವರ ಕಾಲ್ನಡಿಗೆಯ ಸಂಚಾರ ಸ್ಥಗಿತಗೊಂಡಿತು. ಭಕ್ತ ಕಂಬಳಿಯ ಕೈತೊಟ್ಟಿಲಲ್ಲಿ ಊರಿಂದೂರಿಗೆ ಶರಣರ ಸಂಚಾರ ಸಾಗುತ್ತಿತ್ತು ಹೀಗೆ ಭಕ್ತರ ಸಹಾಯದಿಂದ ಜಂಗಮಾರ್ಚನೆ ಮುತ್ತೈದೇಯರ ಪೂಜೆ ನಡೆಯುತ್ತಿತ್ತು. ಬೇಡಿದವರ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದರು. ಅವರ ಕಾಯ ಲಿಂಗ ಕಾಯವಾಗಿತ್ತು. ಅಲ್ಲಲ್ಲಿ ಬೀಡಾರ ಹೂಡುತ್ತ ಭಕ್ತರ ಬಯಕೆಗಳನ್ನು ಪೂರೈಸುತ್ತ ಆಂಧ್ರಪ್ರದೇಶದ ಬೂಚನಳ್ಳಿ ಗ್ರಾಮದ ಹಿರೇಮಠದಲ್ಲಿ ೭-೮ ದಿವಸಗಳ ಕಾಲ ತಂಗಿದ್ದರು. ಭಕ್ತರ ಬಿನ್ನಹಗಳು ಅವ್ಯಾಹತವಾಗಿ ನಡೆದಿದ್ದವು. ಫಾಳೆಪ್ಪ ಹಳೆಂಬರ ಎಂಬ ಭಕ್ತನು ಶರಣರ ಬಳಿಗೆ ಬಂದು ಅಡಿಗೆರಗಿ ಬಿನ್ನಹಕ್ಕಾಗಿ ವಿನಂತಿಸಿದರು. ಆಗ ಶರಣರು ಫಾಳೆಪ್ಪನನ್ನು ಕುರಿತು ಫಾಳೆಪ್ಪ ನಿನ್ನ ಮನೆಗೆ ಬಿನ್ನಹಕ್ಕೆ ನಾಳೆ ಬರುತ್ತೇನೆ ಆದರೆ ನಿನ್ನ ಬಿನ್ನಹ ಕೊನೆಯ ಬಿನ್ನಹವಪ್ಪ ಎಂದು ನುಡಿದರು. ಆಗ ಶರಣರಿಗೆ ೧೦೫ ವರ್ಷಗಳಾಗಿದ್ದವು. ಫಾಳೆಪ್ಪನು ಹಿರೇಮಠದಲ್ಲಿ ಪ್ರಸಾದ ಸೇವಿಸಿ ಊರಿಗೆ ಹೊರಟರು.

ರೇವಪ್ಪಯ್ಯನವರು ಮರುದಿನ ಸತ್ವಾರಕ್ಕೆ ಬರಲೇ ಇಲ್ಲ. ಹೀಗೆ ಒಂದು ವಾರ ನಿರೀಕ್ಷಣೆಯಲ್ಲಿ ಫಾಳೆಪ್ಪನು ಕಳೆದನು. ಭಕ್ತಿಯ ನಿಷ್ಠೆಯಿಂದ ಗುರುಗಳು ಬರುವವರೆಗೆ ಉಪವಾಸದ ವೃತ್ತ ಕೈಕೊಂಡನು. ಅಂತು ಶರಣರ ಸಂಚಾರ ಬೂಚನಳ್ಳಿ ಗ್ರಾಮದಿಂದ ಸತ್ವಾರಕ್ಕೆ ಹೊರಟಿತು. ಫಾಳೆಪ್ಪನು ಪರಖಾನೆಯಲ್ಲಿ ಎಂದಿನಂತೆ ಭಕ್ತರು ಶಿವಾನುಭವಕ್ಕಾಗಿ ಕಾಯ್ದು ಕುಳಿತಿದ್ದರು. ಸತ್ವಾರ ಫಾಳೆಪ್ಪನ ಮನೆಗೆ ಶರಣರು ಬಂದು ತಲುಪಿದರು. ಫಾಳೆಪ್ಪನು ಶರಣರನ್ನು ವಂದಿಸಿ ಸ್ವಾಗತಿಸಿದನು. ಅಷ್ಟರಲ್ಲಿ ಅದೇ ಗ್ರಾಮದ ಶೆಟಕಾರ ಗುಂಡಪ್ಪನು ಮರುದಿನದ ಬಿನ್ನಹಕ್ಕೆ ಶರಣರನ್ನು ಆಮಂತ್ರಿಸಲು ಬಂದಿದ್ದನು. ಆಗ ಶರಣರು ಎರಡು ಕಣ್ಣುಗಳನ್ನು ಮುಚ್ಚಿ ಧ್ಯಾನಾಸಕ್ತರಾಗಿ ಮತ್ತೆ ಕಣ್ತೆರೆದು ಆಗಲೇ ಫಾಳೆಪ್ಪನ ಬಿನ್ನಹದ ಜೊತೆಗೆ ನಿನ್ನ ಬಿನ್ನಹ ಸ್ವೀಕರಿಸುತ್ತೇನೆ ಎಂದರು.

ಅಂದು ಫಾಳೆಪ್ಪನ ಮನೆಯಲ್ಲಿ ೧೦೫ ಜಂಗಮರು ೧೦೫ ಮುತ್ತೈದೆಯರ ಪೂಜೆ ನೆರವೇರುತ್ತಿತ್ತು. ನಿತ್ಯ ಜರುಗುವ ೨೧ ಜಂಗಮರು ಪೂಜೆ ೫ ಜನ ಮುತ್ತೈದೆಯರ ಪೂಜೆಯ ಕಾರ್ಯಕ್ರಮಗಳು ಆ ದಿನ ಹೆಚ್ಚಿನ ಸಂಖ್ಯೆಯಲ್ಲಿ ಜೊತೆ ಜೊತೆಯಾಗಿ ವಿಜೃಂಭಣೆಯಿಂದ ಜರುಗಿದವು. ಶರಣರು ಪ್ರಸಾದ ಸೇವಿಸಿದ ಬಳಿಕ ಪರಖಾನೆಯಲ್ಲಿ ಕುಳಿತುಕೊಂಡು ಶಿಷ್ಯರೆಲ್ಲರಿಗೆ ಕರೆದರು. ಮಾವಿನ ಹಳ್ಳಿಯ ದೊಡಗಾಪುರ ಗುರಪ್ಪನವರು ಶರಣರ ಸೇವಾಧಾರಿಯಾರಿ ಬಳಿಯಲ್ಲೇ ಇದ್ದರು. ಆಗ ಶರಣರು ಬಸವಣ್ಣನವರ ಕಳಬೇಡ.........ಕೊಲಬೇಡ ಈ ವಚನದ ಮೇರೆಗೆ ಶಿಷ್ಯರನ್ನು ಬಾಳಲು ಆಜ್ಞಾಪಿಸಿದರು. ಅದು ಅವರ ಜೀವತಾವಧಿಯ ಕೊನೆಯ ಸಂದೇಶವಾಗಿತ್ತು. ಆಗ ಅವರು ಮತ್ತೆ ಎಲ್ಲರನ್ನು ಉದ್ದೇಶಿಸಿ ಈ ತಿರುಕ ಅಯ್ಯನ ಜೊತೆಗೆ ಜೊತೆಗೂಡಿ ಇದುವರೆಗೆ ಬಾಳಿದಿರಿ ತಾಯಿಗಿಂತಲೂ ಸಾವಿರಾರು ಪಟ್ಟು ತಮ್ಮ ಉಪಕಾರ

ನನ್ನ ಮೇಲಿದೆ, ಪರಮಾತ್ಮನು ತಮ್ಮೆಲ್ಲರಿಗೆ ತಮ್ಮ ಕುಟುಂಬ ವರ್ಗಕ್ಕೆ ಸನ್ಮರ್ಗಗಳನ್ನುಂಟು ಮಾಡಲಿ! ಎಂದು ಹೇಳಿದರು. ಯಾರಿಗಾದರೂ ಏನಾದರೂ ಬೇಡುವುದು ಇದ್ದರೆ ಕೇಳಿ ಎಂದು ಕರೆಯಿತ್ತರು. ಆಗ ಯಾರು ಮುಂದೆ ಬರಲಿಲ್ಲ ಭಜನೆಗೆ ತೊಡಗಿದರು, ಮಧ್ಯರಾತ್ರಿಯವರೆಗೂ ಶಿವಭಜನೆ ಸಾಗಿತು. ನಂತರ ಎಲ್ಲ ಶಿಷ್ಯರನ್ನು ಮತ್ತೊಮ್ಮೆ ಬಳಿಗೆ ಕರೆದು ನಾವು ಶಿವಲೋಕ ಯಾತ್ರೆ ಮಾಡುತ್ತಿದ್ದೇವೆ. ಬಸವಾ ಬಸವಾ ಬಸವಾ ಎಂದು ಬಸವನಾಮಸ್ಮರಣೆ ಮಾಡುತ್ತ ಓಂ ನಮಃ ಶಿವಾಯ ಎನ್ನುತ್ತ ಶಿವನಲ್ಲಿ ಲೀನವಾದರು. ಅಂದು ೧೯೩೬ನೇಯ ಇಸ್ವಿಯ ಸೋಮವಾರ ಆ ದಿನ ಎಲ್ಲೆಲ್ಲೂ ಮೋಡ ಕವಿದು ಭಯಂಕರ ಮಳೆಯಾಯಿತು. ಶರಣರು ಲಿಂಗೈಕ್ಯರಾದ ಸುದ್ದಿ ಭಕ್ತರು ನಾಲ್ದೆಸೆಗೂ ತಲುಪಿಸಿದರು. ಅದೇ ಸಮಯಕ್ಕೆ ಶೆಟಕಾರ ಗುಂಡಪ್ಪನ ಮನೆಯ ಮುಂದೆ ಬಿನ್ನಹದ ಪದಾರ್ಥಗಳೆಲ್ಲ ಮಾಯವಾಗಿ ಬಿಟ್ಟಿದ್ದವು. ಶರಣರು ಕಾಯಬಿಟ್ಟ ಮೇಲೆ ಅಕಾಯವಾಗಿ ಆ ಪದಾರ್ಥಗಳನ್ನು ಸ್ವೀಕರಿಸಿದರು ಎಂದು ಶಿಷ್ಯರು ಮಾತಡತೋಡಗಿದರು. ಅದು ಗುರು ಮನೆಯ ಮಾತು ಈ ಸುದ್ದಿ ಕೇಳಿ ಅಪಾರ ಜನಸಾಗರ ಹರಿದು ಬರಹತ್ತಿತು. ಖೇಣಿ ಮಡಿವಾಳಪ್ಪನವರು, ಮಹಾರುದ್ರಪ್ಪನವರು, ಚಂದ್ರಶೇಖರ ಪಾಟೀಲ, ಮಹಾಗಾಂವ ಸಾಲಿ ಮಹಾದಪ್ಪನೋರ, ರೇವಣಸಿದ್ದಪ್ಪನವರು ದಾಡಗಿಯ, ಪರಶಣೆ ಸಾಹುಕಾರ ಡುಮಣೆ ಮಹಾದಪ್ಪನವರು, ಭಾಲ್ಕಿಯ ಅಷ್ಟೂರೆ ಪ್ರಭುರಾಯರು ಖಂಡ್ರೆ ಮನೆತನದವರು ಧಾವಿಸಿ ಬಂದರು. ಯರನಳ್ಳಿಯ ವಡಗಾಂವ ದೇಶಮುಖರು ಬಂದರು. ಬಂದು ಶರಣರು ತಮ್ಮಿಂದ ಅಗಲಿದರೆಂದು ಮುಗಿಲು ಮುಟ್ಟುವ ರೋಧನ ಇನ್ನೊಂದಡೆ ಭಜನಾತ್ತಂಡದವರ ಭಜನಾ ಗಾಯನದ ಝೇಂಕಾರ ಮುಗಿಲ ಮುಟ್ಟಿತು. ಮುಸಲ್ಮಾನರ ದಬ್ಬಾಳಿಕೆ ಹೆಚ್ಚಾಗಿ ಕೊಲೆ ಸುಲಿಗೆ ದರೋಡೆಗಳು ತಾಂಡವ ಆಡುತ್ತಿದ್ದ ಆ ಕಾಲದಲ್ಲಿ ಪಾರ್ಥಿವ ಶರೀರ ಸತಿವಾರದಿಂದ ೩೦–೩೫ ಮೈಲಿ ದೂರದಲ್ಲಿರುವ ನಾವದಗಿಗೆ ಹೇಗೆ ತರಬೇಕು ಎಂಬ ಭಯ. ಇನೊಂದೆಡೆ ಲೆಕ್ಕ ಇಲದಷ್ಟು ಜನ ಜೀವ ಭಯದಿಂದ ರಜಾಕಾರರಿಗೆ ಅಂಜಿ ಸೋಲಾಪುರದೆಡೆಗೂ ಪಲಾಯನ ಮಾಡಿತು. ಆದರೆ ರೇವಪ್ಪಯ್ಯನವರ ಆಶೀರ್ವಾದ ಮತ್ತು ಯೋಗ ಬಲ ಹೇಗಾದರೂ ಮಾಡಿ ಸತಿವಾರ ನಿಡವಂಚಿ ರಂಜೇರಿ ದೊಡ್ಡ ಹಳ್ಳಿಖೇಡ ಚಿಂಚೋಳಿ ಏಣಕೂರ ಮಾರ್ಗವಾಗಿ ಮೆರವಣಿಗೆ ನಾವದಗಿಗೆ ತಂದರು.

ಹುಲಕುಂಟಿ ಮಠದ ಶ್ರೀ ಮ.ನಿ.ಪ್ರ ಸ್ವರೂಪಿಗಳಾದ ಕರಿಬಸವಯ್ಯನವರು ಗುಲಬರ್ಗಾದ ರೇವಣಸಿದ್ದಪ್ಪನವರು, ಚೌಕಿ ಮಠದ ಶಾಂತಾಯ್ಯನವರು, ಭಾಲ್ಕಿಯ ಚೆನ್ನಬಸವ ಪಟ್ಟದೇವರು, ಹೊಟಗಿಯ ಚೆನ್ನವೀರ ಶಿವಾಚಾರ್ಯರು, ಗುರುಮಟಕಲ ಶಾಂತವೀರ ಶಿವಾಚಾರ್ಯರು, ಬಸವತೀರ್ಥ ಮಠದ ಗುರುಗಳು, ಮೇಹಕರದ ಕಟ್ಟಿ ಮಠದ ಮನೆಯ ಗುರುಗಳು, ದೊಡ್ಡ ಹುಲಸೂರಿನ ಮಠದ ಸ್ವಾಮಿಗಳು ಇನ್ನೂ ಅನೇಕ ಮಠಾಧೀಶರು ಸೇರಿ ಸಕಲ ವಿಧಿ ವಿಧಾನಗಳೊಂದಿಗೆ ದಿನಾಂಕ ೨೫–೧೨–೧೯೩೬ ಗುರುವಾರದಂದು ಸಾಂಗವಾಗಿ ಶ್ರೀ ರೇವಪ್ಪಯ್ಯನವರ ಸಮಾಧಿಯನ್ನು ಮಾಡಿದರು.

ಅ ದಿನದ ನೆನಪಿಗಾಗಿ ಇಂದಿಗೂ ಕುಡಾ ನಾವದಗಿಯಲ್ಲಿ ಐದು ದಿವಸ ಪಾದಪೂಜೆ, ಮಹಾಗಣಾರಾಧನೆ, ಅಗಿಪೂಜೆ, ತೇರು, ಕುಸ್ತಿ ಹೀಗೆ ಸಾಂಗವಾಗಿ ಪ್ರತಿವರುಷ ಜಾತ್ರೆಯು ನಡೆದುಕೊಂಡು ಬರುತ್ತಲಿದೆ. ಆದ್ದರಿಂದ ನಾನು ನನ್ನಗೆ ನಿಲುಕಿದಷ್ಟು ಮಾಹಿತಿಯನ್ನು ಈ ಅಧ್ಯಯದಲ್ಲಿ ಹಿಡಿದಿಟಿರುತ್ತೇನೆ.

**ರೇವಪ್ಪಯ್ಯನವರ ಸಾಹಿತ್ಯ**

ರೇವಪ್ಪನವರು ಐಹಿಕ ಬದುಕಿನ ಕಾಮನೆಗಳನ್ನು ಇಲ್ಲವಾಗಿಸಿ ಬದುಕಿದ ಶರಣ. ೧೨ನೇ ಶತಮಾನದ ಬಸವಾದಿ ಶರಣರ ತತ್ವಗಳನ್ನು ಜನರಮನದಲ್ಲಿ ಬೇರೂರಿಸಲು ಹೊರಟ ಆಧ್ಯಾತ್ಮದ ಕೃಷಿಕಾರ. ವೀರಶೈವ ಸಂಸ್ಕೃತಿಯ ಸಾರವನ್ನು ಅರಿತುಕೊಂಡು ಬದುಕಿದ ವೀರಶೈವಧರ್ಮದ ಶಕ್ತಿಯ ರೂಪವೇ ರೇವಪ್ಪಯ್ಯನವರು. ರೇವಪ್ಪಯ್ಯನವರ ಹಲವಾರು ಶಿಷ್ಯರುಗಳಲ್ಲಿ ಒಬ್ಬರಾಗಿದ ಹಾಣೇಗಾಂವ ಬಸವಲಿಂಗ ಶಾಸ್ತ್ರೀಗಳು ಅವರ ಸಾಹಿತ್ಯ ಕೃಷಿಯ ಬಗೆಗೆ ಅವರು ಹೀಗೆ ಹೇಳಿದ್ದಾರೆ. "ರೇವಪ್ಪಯ್ಯನವರು ಬರೆಯಬೇಕೆಂದು ಬರೆಯುತ್ತಿರಲಿಲ್ಲ. ಅವರು ಶಿಷ್ಯರಿಗೆ ಅನುಭಾವ ಉಪದೇಶ ಮಾಡುತ್ತಿರುವಾಗ ನಡು–ನಡುವೆ ಅವರಿಗೆ ತೋಚಿದ ಅನುಭಾವದ ಪದ್ಯ ಹಾಡಿ ಹೇಳುತ್ತಿದ್ದರು. ಅದು ಅವರ ಆಶು ಕವಿತ್ವ. ಅವರ ಹಾಡುಗಳನ್ನು ಯಾರು ಸಂಗ್ರಹಿಸಲಿಲ್ಲ. ಕೇಳಿದವರು ಕೆಲ–ಕೆಲವರು ಕಲಿತುಕೊಂಡಿದ್ದಾರೆ. ಹೀಗಾಗಿ ಹೆಚ್ಚಿನ ಸಂಖ್ಯೆಯ ಹಾಡುಗಳು, ಅವರು ಹೇಳಿದ ಸಾಹಿತ್ಯ ಅಷ್ಟು ಉಳಿದಿಲ್ಲ ಶೋಧಿಸಿರುವ "ಮನಬೋದೆ" ಹೆಸರೆ ಸೂಚಿಸುವಂತೆ ಆತ್ಮಕೆ ಬೋಧನೆ ಎಂತೆಯೇ ಕರೆಯಲಾಗಿದೆ. ಅದನ್ನು ಈ ಕೆಳಗೆ ಸವಿಸ್ತಾರವಾಗಿ ನಿರೂಪಿಸಲಾಗಿದೆ. ಉಳಿದ ಸಾಹಿತ್ಯ ಕಾಲಗರ್ಭದಲ್ಲಿಯೇ ಅಡಗಿ ಹೋಗಿದೆ. ಉಳಿದ ಕೆಲವು ಹಾಡುಗಳಲ್ಲಿ ಕೆಲವೊಂದು ತತ್ವಪದಗಳು ಮತ್ತು ಮನಭೋದೆ ಗ್ರಂಥದ ಸಾರ ಈ ಕೆಳಗಿನಂತೆ ವಿವರಿಸಲಾಗಿದೆ.

"ಮನಬೋಧೆಯ ವೈಜ್ಞಾನಿಕ ನಿಲುವುಗಳು"

ಭಾರತೀಯ ಆಧ್ಯಾತ್ಮಿಕ, ಧಾರ್ಮಿಕ ಪರಂಪರೆಯಲ್ಲಿ ವೈಜ್ಞಾನಿಕತೆಗೆ ಬಹಳ ಮಹತ್ವವಿದೆ. ಮಾನವನ ದೈಹಿಕ ಮತ್ತು ಮಾನಸಿಕ ಸ್ವಭಾವ, ರೀತಿ, ನೀತಿಗಳನ್ನು ನಿಯಂತ್ರಿಸಿ ಒಳ್ಳೆಯ ಮಾನವನಾಗಿ ಪರಿವರ್ತಿಸುತ್ತದೆ. ಮನುಷ್ಯನ ಒಳಿತು ಮತ್ತು ಕೆಡಕಿಗೆ ಮನಸ್ಸೆ ಕಾರಣ. ಮನಸ್ಸಿಗೆ ಇನ್ನೊಂದು ಹೆಸರು ಚಂಚಲತೆ. ಒಂದೇ ಒಂದು ವಿಷಯದ ಮೇಲಾಗಲಿ, ವಸ್ತುವಿನ ಮೇಲಾಗಲಿ ಮನಸ್ಸು ನಿಲ್ಲಲಾರದು, ಅಂತೆಯೇ ದಾಸರು ಮನಸ್ಸು ನಿಲ್ಲಿಸುವುದು ಬಲು ಕಠಿಣವೆಂದು ಹೇಳಿದ್ದಾರೆ. ಶರಣರು, ದಾಸರು, ತತ್ವಪದಕಾರರು ಮನಸ್ಸನ್ನು ಕಪಿಗೆ ಹೋಲಿಸುತ್ತಾ ಬಂದಿದ್ದಾರೆ. "ಮನವೆಂಬ ಮರ್ಕಟನ ತಡೆಯಲಾರೆನು ದೇವಾ ಎನಿತಿದರ ಚಪಲ ಚೇಷ್ಟೆಗಳ ವರ್ಣಿಸಲಿ" ಎಂದು ಹೇಳಲಾಗಿದೆ. ಒಂದು ಕ್ಷಣ ಸನ್ಯಾಸಿಯಾಗಿ ತಪಶ್ಚರ್ಯ ಮಾಡಲು ಹಿಮಾಲಯಕ್ಕೆ ಹೊರಡು ಎಂದು ಮನಸ್ಸು ಅನ್ನುತ್ತದೆ. ಆದರೆ ನಂತರವೇ ತರುಣಿಯರ ಕಂಕುಳೊಳು ಕೈಯಿಕ್ಕಿ ನಗಿಸು ಎಂದು ಮಾರ್ನುಡಿಯುತ್ತದೆ. ಮತ್ತೊಂದು ಕಡೆ ಹಗಲು ದರೋಡೆ ಮಾಡಿ ಹಣಗಳಿಸು ಎನ್ನುತ್ತದೆ. ಇನ್ನೊಂದು ಕಡೆ ಎಲ್ಲಾ ಆಸ್ತಿಯನ್ನು ಮಾರಿ ಕಾಶಿಯಾತ್ರೆ ಕೈಕೊಳ್ಳು ಎನ್ನುತ್ತದೆ. ಈ ರೀತಿ ಮನಸ್ಸು ಕ್ಷಣಕ್ಷಣಕ್ಕೂ ಬದಲಾಗುತ್ತ ಮನುಷ್ಯನನ್ನು ಘಾಸಿಗೊಳಿಸುತ್ತದೆ. ಬಸವಣ್ಣನವರು ತಮ್ಮ ಮನವನ್ನು ಮಂಗಕ್ಕೆ ಹೋಲಿಸಲು ಹಿಂದೆ ಮುಂದೆ ನೋಡಿಲ್ಲ. "ಕೊಂಬೆಯ ಮೇಲಿನ ಮರ್ಕಟನಂತೆ ಲಂಘಿಸುವದೆನ್ನ ಮನ" ಎಂದು ಹೇಳುತ್ತ ತಮ್ಮ ಮನಸ್ಸಿಗೂ ಮಂಗಕ್ಕೂ ಯಾವ ಭೇದವೂ ಇಲ್ಲವೆಂದು ಹೇಳಿದ್ದಾರೆ. ಎಲ್ಲ ಪ್ರಾಣಿಗಳಲ್ಲಿ ಶ್ರೇಷ್ಠನಾದ ಮನುಷ್ಯನಿಗೆ ಮರ್ಕಟತನ ಏಕೆ ಕಾಡುತ್ತದೆ? ಕಾರಣವಿಷ್ಟೆ ಉತ್ಕ್ರಾಂತಿಯ ಪಥದಲ್ಲಿ ಮನುಷ್ಯನ ಸುಪ್ತ ಮನಸ್ಸಿನ ಅಂತರಾಳದಲ್ಲಿ ಪ್ರಾಣಿಗಳ ಸಂಸ್ಕಾರ ಎಂದು ಹೇಳಲಾಗಿದೆ. ಮನುಷ್ಯ ಅತ್ಯಂತ ಭೀಕರ ಪ್ರಾಣಿಗಳಿಗಿಂತ ಹೆಚ್ಚು ಗಂಡಾಂತರಕಾರಿಯಾಗಿದ್ದಾನೆ. ಅವನ ಮನಸ್ಸಿನಲ್ಲಿ ಸುಳಿದು ಹೋಗುವ ಭಾವನೆಗಳನ್ನೆಲ್ಲ ತಿಳಿಸಿದ್ದರೆ, ಅವನೊಬ್ಬ ಅತ್ಯಂತ

ದುಷ್ವನೆನಿಸುತ್ತಾನೆ ಅಂತೆಯೇ ಈ ಪ್ರಾಣಿತನವನ್ನು ಹೋಗಲಾಡಿಸಿದರೆ ಮಾತ್ರ ಮನುಷ್ಯ ನಿಜವಾದ ಮನುಷ್ಯನಾಗುತ್ತಾನೆ. ಮನಸ್ಸನ್ನು ನಿಯಂತ್ರಿಸುವ ಸಾಧನವೇ ಯೋಗ. ಸಾಮಾನ್ಯ ಅರ್ಥದಲ್ಲಿ ಯೋಗ ಎಂದರೆ ಎರಡು ವಸ್ತುಗಳನ್ನು ಸೇರಿಸುವುದು ಎಂದಾಗುವುದು. ಆಧ್ಯಾತ್ಮದ ಸಾಧನೆಯಲ್ಲಿ ಜೀವಾತ್ಮ ಪರಮಾತ್ಮನಲ್ಲಿ ಸೇರುವುದೇ ಯೋಗ. ಯೋಗದ ಬಗ್ಗೆ ದೀರ್ಘವಾಗಿ ಬರೆದ ಪತಂಜಲಿಯು ಯೋಗಶ್ಚಿತ್ತವೃತ್ತಿ ನಿರೋಧಃ ಎಂದಿರುವನು. ಚಂಚಲವಾದ ಮನಸ್ಸನ್ನು ನಿಯಂತ್ರಿಸಿದರೆ ಜೀವಾತ್ಮದ ಅರಿವು ದೋರಕುತ್ತದೆ. ಜೀವಾತ್ಮ-ಪರಮಾತ್ಮರ ಸಂಯೋಗವೇ ಯೋಗ ಅಥವಾ ಧ್ಯಾನ ದೇಹ ಮತ್ತು ಮನವನ್ನು ಶುದ್ಧಗೊಳಿಸುವುದು ಧ್ಯಾನಮಾರ್ಗ. ಧ್ಯಾನದಲ್ಲಿ ಹಲವಾರು ವಿಧಗಳು ಇವೆ. ಭಕ್ತಿ, ಜ್ಞಾನ 'ಕರ್ಮಗಳನ್ನು ಸಮನ್ವಯಗೊಳಿಸುವುದು ಶಿವಯೋಗ' ಶರಣರ ವಚನಗಳಲ್ಲಿ ಬೋಧಿಸಿದ ಶಿವಯೋಗದ ತತ್ವಗಳನ್ನು ಮಹಾಶರಣ ಶ್ರೀ ರೇವಪ್ಪಯ್ಯನವರು ರಚಿಸಿದ ಮನಬೋಧೆ ಕೃತಿಯಲ್ಲಿ ಕಾಣಬಹುದಾಗಿದೆ.

ಕ್ರಿ.ಶ ೨ನೇ ಶತಮಾನದಲ್ಲಿ ರಚಿತವಾದ ಪತಂಜಲಿಯ ಯೋಗಸೂತ್ರದಲ್ಲಿ ಯೋಗದ ಅಷ್ಟಾಂಗಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳ ಕುರಿತು ದೀರ್ಘ ವಿವರಣೆ ಇದೆ. ಅದಕ್ಕೆ ಅನೇಕ ವ್ಯಾಖ್ಯಾನಗಳಿವೆ. ಶ್ರೀ ರೇವಪ್ಪಯ್ಯ ಶರಣರ ಮನಬೋಧೆ ಎಂಬ ಹೆಸರೇ ಅರ್ಥಪೂರ್ಣವಾಗಿದೆ. ಮನಸ್ಸಿನ ಮೂಲಕವೇ ಯೋಗಸಾಧನೆ ನಡೆಯುದರಿಂದಲೂ, ಮನಸ್ಸೆ ಎಲ್ಲ ಕರ್ಮಗಳಿಗೂ ಕಾರಣವಾಗಿರುವುದರಿಂದಲೂ ಮನಸ್ಸಿನ ಶುದ್ಧತೆಯನ್ನು ಕಾಪಾಡಿಕೊಳ್ಳಬೇಕು. ವಚನಕಾರರು ಮನಸ್ಸನ್ನು ಮರ್ಕಟಕ್ಕೆ ಹೋಲಿಸ್ಸಿದ್ದಾರೆ. ಏಕೆಂದರೆ ಆ ಮನಸ್ಸು ಯಾವಾಗ ಏನು ಬೇಕಾದರೂ ಕೆಟ್ಟ ನಿರ್ಧಾರವನ್ನು ತೆಗೆದುಕೊಳ್ಳುವಲ್ಲಿ ಕಾರಣವಾಗಿರುತ್ತದೆ. ಜನ್ನನ ಅನಂತನಾಥ ಪುರಾಣ ಮತ್ತು ಯಶೋಧರ ಚರಿತ್ರೆ ಈ ಎರಡು ಕೃತಿಗಳಲ್ಲಿ ಮನಸ್ಸಿನ ಮರ್ಕಟಕ್ಕೆ ಒಳಗಾಗಿ ಕೆಟ್ಟ ನಿರ್ಧಾರವನ್ನು ತೆಗೆದುಕೊಂಡು ಅಮೃತಮತಿಯು ಅಷ್ಟವಂಕನ ಮೇಲೆ ಮೋಹಿಸಿ ಅವಳ ಮನಸ್ಸು ಅವಳ ಕೈ ತಪ್ಪಿ ಜಾರಿದಾಗ ಚಂದ್ರಮತಿ ಮತ್ತು ಯಶೋಧರ ಅವಳನ್ನು ತಡೆಯಲು ಹೋಗಿ, ಹಿಟ್ಟಿನ ಕೋಳಿ ತಯಾರಿಸಿ ಕೊಯಿದ್ದಿರುದರಿಂದ ಹಲವಾರು ಜನ್ಮಗಳನ್ನು ಎತ್ತಿ ಅಭಯರುಚಿ ಮತ್ತು ಅಭಯಮತಿಯಾಗಿ ಜೈನಧರ್ಮದ ಸಾರವನ್ನು ಸಾರುತ್ತಾರೆ. ಅನಂತನಾಥ ಪುರಾಣದಲ್ಲಿಯೂ ಚಂಡಾಶಾಸನ ತನ್ನ ಗೆಳೆಯ ಮನೆಗೆ ಊಟಕ್ಕೆ ಬಂದು ಗೆಳೆಯನ ಪತ್ನಿಯಾದ ಸುನಂದೆಯನ್ನು ಮೋಹಿಸಿ ಅವಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾನೆ. ಆದರೆ ಅವಳು ತನ್ನ ಪತಿಯೇ ಪರಮೇಶ್ವರನೆಂದು ಬದುಕಿದಳು. ಸುನಂದೆಯು ಸಿಗದಿದ್ದಾಗ ಚಂಡಾಶಾಸನ ನಿನ್ನ ಗಂಡ ಇದ್ದರೆ ತಾನೇ ನೀನು ಎಂದು ಬೇರೆಯಾರದೋ ತಲೆಯನ್ನು ತೋರಿಸಿ ನೋಡು ನಿನ್ನ ಗಂಡನ ತಲೆ ಕತ್ತರಿಸಿದ್ದೇನೆ, ಎಂದಾಗ ವ್ಯಥೆಗೊಂಡ ಸುನಂದೆ ಕೊನೆಗೆ ಅಗ್ನಿಗೆ ಹಾರುತ್ತಾಳೆ. ಚಂಡಾಶಾಸನನು ಕುಡಾ ಇದನ್ನು ನೋಡಿ ನಾಚಿಕೊಂಡು ತನ್ನ ಪ್ರಾಣ ಕಳೆದುಕೊಳ್ಳುತ್ತಾನೆ. ಹೀಗೆ ಮನಸ್ಸು ನಮ್ಮ ನಿಯಂತ್ರಣದಲ್ಲಿ ಇಡಲು ಧ್ಯಾನ, ಯೋಗ ತುಂಬಾ ಸಹಾಯಕ ಮಾಡುತ್ತವೆ. ಅದು ಯೋಗದಿಂದಲೂ ಅಥವಾ ಧ್ಯಾನದಿಂದಲೂ ಸಾಧ್ಯ.

ರೇವಪ್ಪಯ್ಯನವರು ಮನಬೋಧೆಯಲ್ಲಿ ಯೋಗಿವರನಾದ ಗುರುವು ವಾತ್ಸಲ್ಯದಿಂದ ಶಿಷ್ಯನಿಗೆ ಉಪದೇಶ ಮಾಡುತ್ತಾನೆ. ಪ್ರಶ್ನೋಪಪ್ರಶ್ನೆಯ ಮೂಲಕ ತಿಳಿಸಿಕೊಡುವನು. ಶರಣರ ಷಟಸ್ಥಲ ಮಾರ್ಗದಲ್ಲಿ ಅಜ್ಞಾನದಿಂದ ಭವಬಂಧನದಲ್ಲಿ ತೊಡಗಿದ ಜೀವಿಯ ಅಂಗದ ಮೇಲೆ ಗುರು ಇಷ್ಟಲಿಂಗ ಕೊಟ್ಟು ಮಂತ್ರದೀಕ್ಷೆ ನೀಡಿ ಅರಿವು ಮೂಡಿಸುತ್ತದೆ. ಅಂದಿನಿಂದ ಭಕ್ತನಾಗಿ ಷಟ್‌ಸ್ಥಲ ಮಾರ್ಗದಲ್ಲಿ ಅನುಸಂಧಾನಕ್ಕೆ ತೊಡಗುತ್ತಾನೆ. ಭಕ್ತಸ್ಥಲದಿಂದ ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯಸ್ಥಲದವರೆಗೆ ಮೇಲೆರುವುದೇ ಷಟ್‌ಸ್ಥಲಮಾಗ.ಗುರು ಕರುಣಿಸಿ ಕೊಟ್ಟ ಇಷ್ಟಲಿಂಗವು ಜಗದ ಚೈತನ್ಯವೇ ಗಟ್ಟಿಗೊಂಡ ಅರಿವಿನ ಕುರುಹು ಆಗಿದೆ. ಇಷ್ಟಲಿಂಗದ ಮೂಲಕ ಸಾಧಕನು ತನ್ನನ್ನು ತಾನೇ ಅರಿತುಕೊಳ್ಳುವನು. ಸಾಧಕನ ಅಷ್ಟಮದಗಳ ಅಹಂ ಅಳಿದು ಸೋಹಂ ಭಾವದಲ್ಲಿ ಶಿವನನ್ನು ಪೂಜಿಸುವುದೇ ಶಿವಯೋಗದ ಮಾರ್ಗವಾಗಿದೆ.

ವೀರಶೈವ ಧರ್ಮ ತತ್ವಗಳಾದ ಅಷ್ಟಾವರಣ, ಷಟಸ್ಥಲಗಳ ಮೂಲಕ ಶಿವಯೋಗದ ನಿಜತತ್ವಗಳನ್ನು ಮನಬೋಧೆಯಲ್ಲಿ ಸರಳ ನುಡಿಯಲ್ಲಿ ವಿವರಿಸಲಾಗಿದೆ. ಶಿಷ್ಯ ತನ್ನ ಉದ್ಧಾರಕನಾದ ಗುರುವನ್ನು ಕುರಿತು ತನಗೆ ಷಟಸ್ಥಲ ಮಾರ್ಗದ ಅರಿವು ನೀಡಬೇಕೆಂದು.

ಅಷ್ಟಾವರಣದ ನೆಲೆ ತಿಳಿದು
ಇಷ್ಟಲಿಂಗ ಪೂಜೆಯಲಿ ನಿಷ್ಠನಾಗಿ
ಜ್ಞಾನಮಾರ್ಗವ ತಿಳಿದು
ದೀರ್ಘದಂಡನಮಸ್ಕಾರ ಮಾಡಿ
ಸಾರ್ಥಕವಾಗಬೇಕೆಂಬ ಅಪೇಕ್ಷೆ

ಉಂಟಾಗಿ ನಿಮ್ಮ ಸಾನಿಧ್ಯಕ್ಕೆ ಬಂದೇನೆಂದು ಕೇಳಲು, ಶಿಷ್ಯನ ಸದೀಚ್ಛೆಯನ್ನು ಅರಿತ ಗುರು ಸಂತೋಷದಿಂದ ಇಷ್ಟಲಿಂಗವನ್ನು ಕರುಣಿಸುವುದರ ಜೊತೆಗೆ ದೀಕ್ಷೆ ನೀಡಿ.

ಪ್ರಾತಃ ಕಾಲದಲಿ ಎದ್ದು,
ಗುರುಸ್ಮರಣೆಯ ಮಾಡುತ್ತ
ಹಸ್ತ ಪಾದಗಳ ತೊಳೆದು
ಮುಖಮಜ್ಜನಂ ಮಾಡಿ
ಜಳಕವನು ಮಾಡಿ
ಗುರುವಿನ ಧ್ಯಾನ ಮಾಡುತ್ತಃ
ದೇವರ ಮೆನೆಗೆ ಹೋಗಿ
ಪೂರ್ವದಿಕ್ಕಿಗೆ ಮುಖವ ಮಾಡಿ ಆಸನ ಹಾಕಿ

ಈ ಮೇಲಿನ ಸಾಲುಗಳಲ್ಲಿ ವೀರಶೈವ ತತ್ವದ ಅಷ್ಟಾವರಣದ ಮಹತ್ವ ಮತ್ತು ಪೂಜಾವಿಧಿಯನ್ನು ಗುರು ವಿವರವಾಗಿ ತಿಳಿಸುತ್ತಾರೆ. ಗುರು ಶಿಷ್ಯನಿಗೆ ಉಪದೇಶ ಮಾಡಿದರೆ ಸಾಲದು, ಉಪದೇಶ ಅನುಸಂಧಾನಕ್ಕೆ, ಆಚರಣೆಗೆ ಬರಬೇಕು. ಆಚರಣೆಗೆ ಅರಿವು ಮುಖ್ಯ. ಅನುಸರಿಸುವ ಜ್ಞಾನದ ಜೊತೆಗೆ ಕ್ರಿಯೆಯೂ ಪ್ರಮುಖವಾದುದು. ಶಿಷ್ಯನಲ್ಲಿ ಪರಮಜ್ಞಾನ ಮೂಡಲು ದೇಹ-ಮನದ ಪರಿಶುದ್ಧತೆ ಪ್ರಮುಖವಾಗಿದೆ. ದೇಹದ ಪರಿಶುದ್ಧತೆಗೆ ಅಷ್ಟಾವರಣಗಳು ಹೆಚ್ಚಿನ ಮಹತ್ವ ನೀಡಿವೆ. ದೇಹ ಮಲದಿಂದ ಮುಕ್ತವಾಗಲು ಸ್ನಾನ ಮಜ್ಜನ ಮಾಡಿದಂತೆ ಭಕ್ತನ ಅಂಗವೇ ಲಿಂಗವಾಗಿ ಪರಿಶುದ್ಧಗೊಳ್ಳಲು ಧ್ಯಾನದ ಅಗತ್ಯವನ್ನು ಒತ್ತಿ ಹೇಳುವುದರಲ್ಲಿ ದೇಹ ಹಾಗೂ ಮನದ ಸ್ವಾಸ್ಥ್ಯವೂ ಅಡಗಿದೆ.

ಗಳಿಗೆ-ಗಳಿಗೆ ಶ್ರೀ ಗುರುಲಿಂಗಾಯ ನಮಃ
ಎಂಬ ಮಂತ್ರವನ್ನು ನುಡಿಯುತ್ತಿರಬೇಕು.
ನಿಂತಲ್ಲಿ ಕುಂತಲ್ಲಿ, ನಡೆಯಲ್ಲಿ-ನುಡಿಯಲ್ಲಿ
ಕೇಳಲದಲಿ-ಹೇಳಲ್ಲಿ, ಉಂಬಲ್ಲಿ-ಉಡುವಲ್ಲಿ
ಉದ್ಯೋಗ ಮಾಡುವಲ್ಲಿಯೂ ನೆನೆಯಬೇಕು ಎನ್ನುವರು

ಅಷ್ಟಾವರಣಗಳಾದ ವಿಭೂತಿ, ರುದ್ರಾಕ್ಷಿಗಳು ಭಕ್ತನ ಬಾಹ್ಯಶುದ್ಧತೆಗೆ ಸಾಧನಗಳು, ಇಷ್ಟಲಿಂಗ ಮಂತ್ರಗಳು ಮನಸ್ಸಿನ ಏಕಾಗ್ರತೆಗೆ ಕಾರಣವಾಗಿವೆ. ಆದರೆ ಕೇವಲ ದೇಹಶುದ್ಧಿಯಾದರೆ ಸಾಲದು, ಭಕ್ತನ ಮನಶುದ್ಧಿಯಾಗಬೇಕು. ಮನಸ್ಸಿನ ಚಂಚಲತೆ ಬಹಳ ಸೂಕ್ಷ್ಮವಾದುದು, ಮನೋನಿಗ್ರಹ ಮಾಡಿದವನೇ ಯೋಗಿ. ಮಾನವನ ಇಂದ್ರಿಯಗಳೆಲ್ಲವೂ ಮನದಿಚ್ಛೆಯಲ್ಲಿ ನಡೆಯುವುವು. ಮನವೆಂಬ ಮರ್ಕಟನ ಮಣಿಸುವುದು ಸುಲಭವಲ್ಲ, ವಿಷಯವಾಸನೆಗೆ ಎಳೆಸುವ ಮನಸ್ಸಿನ ಏಕಾಗ್ರತೆಗೆ ಶರಣರು ಕರುಣಿಸಿಕೊಟ್ಟಿದ್ದು ಲಿಂಗ, ಲಿಂಗವು ಕಾಯ, ವಾಚಾ, ಮನಗಳನ್ನು ಶುದ್ದೀಕರಣಗೊಳಿಸಿ ಭಕ್ತನ ಅಂಗವೇ ಲಿಂಗ ಮಾಡುವುದು. ಲಿಂಗದಲ್ಲಿ ಏಕಾಗ್ರತೆ ನೆಲೆಸಿ ಮನನಿಗ್ರಹಿಸಲು ಗುರು ಹೇಳಿದ ಓಂ ನಮಃ ಶಿವಾಯ ಎಂಬ ಮಂತ್ರ ಮುಖ್ಯ. ಇಷ್ಟಲಿಂಗದಲ್ಲಿ ಮನ ಗಟ್ಟಿಗೊಳಿಸಲು ಮಂತ್ರ ಸಹಾಯಕವಾಗುವುದು.

ಶರಣರ ಷಟ್‌ಸ್ಥಲ ಮಾರ್ಗದಲ್ಲಿ ಇಷ್ಟಲಿಂಗದಲ್ಲಿ ಭಕ್ತಿ ನೆಲೆಸಿ ಮಾಹೇಶ್ವರ ಸ್ಥಲದಲ್ಲಿ ನಿಷ್ಠೆ ಗಟ್ಟಿಗೊಳ್ಳುವುದು. ಮುಂದೆ ಪ್ರಸಾದಿ ಮತ್ತು ಪ್ರಾಣಲಿಂಗಿಸ್ಥಲದಲ್ಲಿ ಪೂರ್ತಿ ಕರ್ಮಯೋಗದ ಮಹತ್ವವನ್ನು ಕಾಣುತ್ತೇವೆ. ಪ್ರಸಾದಸ್ಥಲದಲ್ಲಿ ಸಾಧಕನು ತಾನು ಮಾಡುವ ಕಾಯಕವು ತನಗಾಗಿ ಅಲ್ಲ ಅದು ಸಮಾಜಕ್ಕಾಗಿ ಜನರಿಗಾಗಿ ಎಂಬ ಭಾವನೆಯಿದೆ. ದೇಹಶ್ರಮದಿಂದ ಬಂದುವೇ ದಾಸೋಹಕ್ಕೆ ಸಲ್ಲುವುದು ಅದರಿಂದ ವ್ಯಕ್ತಿ ಮತ್ತು ಸಮಾಜದ ಏಳಿಗೆಯಾಗಲೂ ಸಾಧ್ಯವಾಗುವುದು. ಭಕ್ತಿ ಕ್ರಿಯಾರೂಪದಿಂದ ಜ್ಞಾನಮಾರ್ಗದಲ್ಲಿ ಮುನ್ನಡೆಯುತ್ತದೆ. ಪ್ರಾಣಲಿಂಗಿಸ್ಥಲದಲ್ಲಿ ಇಷ್ಟಲಿಂಗವು ಪ್ರಾಣಲಿಂಗದಲ್ಲಿ ಒಂದಾಗುತ್ತದೆ. ಹೀಗೆ ಅಂಗ ಲಿಂಗದಲ್ಲಿ ಬೆರೆಯುವ ಅನುಸಂಧಾನವೇ ಶಿವಯೋಗ. ಪ್ರಾಣಲಿಂಗಿಸ್ಥಲದಲ್ಲಿ ಧ್ಯಾನದ ಮೂಲಕ ಯೋಗದ ಕೊನೆಯ ಹಂತವನ್ನು ಕಾಣುತ್ತೇವೆ. ಸ್ಥಲದ ವಿವೇಚನೆಯಲ್ಲಿ ಭಕ್ತಿಗೆ ಮಹಾದೇವಮ್ಮನ ಈ ವಚನ ಗಮನಾರ್ಹವಾದುದು.

ಭಕ್ತಂಗೆ ವಿಶ್ವಾಸ ಮಾಹೇಶ್ವರಂಗೆ ನಿಷ್ಠೆ
ಪ್ರಸಾದಿಗೆ ಅನುಭಾವ, ಪ್ರಾಣಲಿಂಗಿಗೆ ಯೋಗ,
ಶರಣಂಗೆ ಮುನ್ನವೇ ಬಿಡುಗಡೆ
ಐಕ್ಯಂಗೆ ಕುರುಹುಗೊಂಬುದಕ್ಕೆ ಮುನ್ನವೇ ನಿರಾಳ
ಇಂತೀ ಷಟ್‌ಸ್ಥಲ ಬೇಧ ಎನ್ನಯ್ಯ ಪ್ರಿಯ
ನಿಷ್ಕಂಳಂಕ ಮಲ್ಲಿಕಾರ್ಜುನ

ಭಕ್ತಸ್ಥಲದಲ್ಲಿ ವಿಶ್ವಾಸ, ಮಾಹೇಶ್ವರ ಸ್ಥಲದಲ್ಲಿ ನಿಷ್ಠೆ ಪ್ರಸಾಧಿಸ್ಥಲದಲ್ಲಿ ಅನುಭಾವ ಅಳವಟ್ಟಮೇಲೆ ಮುಂದೆ ಸಾಧಕನ ಅಂತರಂಗ ಪರಿವರ್ತನೆಗೆ ಯೋಗ ಸಾಧನವಾಗಿದೆ. ಅಂತಂರಂಗದ ವಿಕಾಸದಲ್ಲಿ ಯೋಗಕ್ಕೆ ಪ್ರಧಾನವಾದವು ಧ್ಯಾನ, ಧಾರಣ, ಸಮಾಧಿಗಳು, ಪ್ರಾಣಲಿಂಗಿ ಸ್ಥಲದಲ್ಲಿ ಈ ಮೂರು ಅಂತರ್ಗತವಾಗಿವೆ. ಇಷ್ಟಲಿಂಗದಲ್ಲಿ ದೃಷ್ಟಿ ನೆಡುವುದರಿಂದ ಅಂಗತ್ರಯ ಕಳೆದು ಲಿಂಗತ್ರಯವಾಗುತ್ತದೆ. ದೃಷ್ಟಿಯೋಗ ಸಾಧನೆಯಾದಂತೆ ಶಿವಯೋಗ ನೆಲೆಗೊಳ್ಳುವುದನ್ನು

ತನ್ನ ಇಷ್ಟಲಿಂಗಕ್ಕೆ ನಿರೀಕ್ಷಿಸಿ ನೋಡಿ
ಎರಡು ನೇತ್ರಂಗಳಂ ಮುಚ್ಚಿ
ಭೃಕುಟಿ ಸ್ಥಳದೊಳಗೆ ಇರ್ದ

ಶುದ್ಧಸ್ಫಟಿಕ ಜ್ಯೋತಿಯಂ ಕಂಡು ಸರ್ವಾಂಗಲಿಂಗರೂಪವಾಗಿ ಅದರಲ್ಲಿಯೇ ಆನಂದ ಪಡುತ್ತಾನೆ. ಆದರೆ ಶಿವಯೋಗದ ಅನುಸಂಧಾನದ ಮಾರ್ಗ ಸೂಕ್ಷ್ಮವಾದುದು. ದೇಹವನ್ನೇ ಆಧಾರವಾಗಿಟ್ಟುಕೊಂಡು ಚೇತನಗೊಳಿಸುವ ಶಿವಯೋಗ ಪ್ರಕ್ರಿಯೆ ಪರಿಪೂರ್ಣ ಜಾಗೃತಿಯ ನಿಲುವನ್ನೇ ನಿರೂಪಿಸುತ್ತದೆ. ದೇಹದ ತ್ರಿಕೂಟಗಿರಿಯಲ್ಲಿ ಪರಶಿವನ ನೆಲೆಗೊಳಿಸಿ, ತ್ರಿಕಾಲವೂ ಪೂಜಿಸುವ ಶಿವಯೋಗದ ಪರಿಕಲ್ಪನೆ ವಿನೂತನವಾಗಿದೆ.

ಇಷ್ಟಲಿಂಗದ ವೃತ್ತದಲ್ಲಿ ಆಧಾರ ಚಕ್ರವು
ಅಲ್ಲಿ, ವ,ಶ,ಷ,ಸ ಎಂಬ ನಾಲ್ಕು ದಳ
'ನ'ಕಾರ ಎಂಬ ಬೀಜಾಕ್ರರವು
ಆಚಾರಲಿಂಗ ಸಂಬಂಧವೆಂದರಿವುದು !

ಇಷ್ಟಲಿಂಗದ ಕಟಿಯಲ್ಲಿ ಸ್ವಾಧೀಷ್ಠಾನ ಚಕ್ರವು
ಅಲ್ಲಿ, ಬ,ಭ,ಮ,ಯ,ರ,ಲ ಎಂಬ ಆರುದಳ
'ಮ' ಕಾರ ಎಂಬ ಜೀಜಾಕ್ಷರವು
ಗುರುಲಿಂಗ ಸಂಬಂಧವೆಂದರಿವುದು!

ಇಷ್ಟಲಿಂಗದ ವರ್ತುಳದಲ್ಲಿ ಮಣಿಪುರ ಚಕ್ರವು
ಅಲ್ಲಿ, ಡ,ಢ,ಣ,ತ,ಥ,ದ,ಧ,ನ,ಪ,ಫ ಎಂಬ ಹತ್ತು ದಳ
'ಶಿ'ಕಾರ ಎಂಬ ಜೀಜಾಕ್ಷರವು
ಜಂಗಮ ಲಿಂಗ ಸಂಬಂಧವೆಂದರಿವುದು!

ಇಷ್ಟಲಿಂಗದ ಗೋಮುಖದಲ್ಲಿ ಅನಾಹುತ ಚಕ್ರವು
ಅಲ್ಲಿ ಕ,ಖ,ಗ,ಘ,ಜ ಚ,ಛ,ಜ,ಝ,ಞ,ಟ,ಠ ಎಂಬ ಹನ್ನೆರಡು ದಳ
'ಮ'ಕಾರ ಎಂಬ ಬೀಜಾಕ್ಷರವು
ಜಂಗಮ ಲಿಂಗ ಸಂಬಂಧವೆಂದರಿಸುವು!

ಇಷ್ಟಲಿಂಗದ ನಾಳದಲ್ಲಿ ವಿಶುದ್ಧಿ ಚಕ್ರವು
ಅಲ್ಲಿ ಅ,ಆ,ಇ,ಈ,ಉ,ಊ,ಋ,ೠ,
ಎ,ಐ,ಒ,ಔ, ಅಂ,ಅಃ ಎಂಬ ಹದಿನಾರು ದಳ
ಪ್ರಸಾದಲಿಂಗ ಸಂಬಂಧವೆಂದರಿವುದು!

ಇಷ್ಟಲಿಂಗದ ಗೋಳದಲ್ಲಿ ಅಜ್ಞಾಚಕ್ರವು
ಅಲ್ಲಿ ಹಂ, ಕ್ಷಂ, ಎಂಬ ಎರಡು ದಳ
'ಓಂ' ಕಾರ ಎಂಬ ಜೀಜಾಕ್ಷರವು
ಮಹಾಲಿಂಗದ ಸಂಬಂಧವೆಂದರಿವುದು!

ಹೀಗೆ........
ಆರು ಸ್ಥಳದಲ್ಲಿ ಆರು ಲಿಂಗವ ಸ್ಥಾಪಿಸಿ
ಬ್ರಹ್ಮಚಕ್ರ, ಶಿಖಾಚಕ್ರ, ಪಶ್ಚಿಮಚಕ್ರ,
ಒಂಭತ್ತು ಸ್ಥಳದಲ್ಲಿ ಒಂಭತ್ತು ಲಿಂಗವ ಸ್ಥಾಪಿಸಿ
ಆ ಇಷ್ಟಲಿಂಗದೊಳಗೆ ಗುರು ನಿರಂಜನನ
ದಿಟ್ಟಿಸಿ ನೋಡಿದರೆ ಬೆಳಗಿನೊಳಗಿನ ಬೆಳಗು
ಕಾಣುವುದೆನ್ನುತ್ತಾನೆ. ಆ ಸ್ಥಿತಿಯನ್ನು

ಬೆಳಗಿನೊಳಗೆ ಬೆಳಗಿನ
ಸುಳಿವಿನೊಳಗೆ ಸುಳಿದು
ಮನ ನಿಲ್ಲಿಸಿ ಎಡ ಹಸ್ತದ ಮುಂಗೈ ಹರಡಿ
ನಾಶಿಕದ ಕೊನೆಗೆ ಸರಿನೋಡಿ ದೇಹ ಅತ್ತಿತ್ತ
ಅಲಿಗಾಡದ ಅನಿಮಿಷ ದೃಷ್ಟಿ ಚಲನೆ ಆಗಗೊಡದೆ.
ಮನ ಅತ್ತಿತ್ತ ಹರಿಗೊಡದೆ ಇಷ್ಟಲಿಂಗವೇ ಪರಶಿವಮೂರ್ತಿ

ಎಂದು ಪೂಜಿಸುವ ಯೋಗವೇ ಪರಿಪೂರ್ಣ ಶಿವಯೋಗವಾಗಿದೆ. ಶಿವಯೋಗದಲ್ಲಿ ದೇಹ ಪರಿಪೂರ್ಣತೆಯನ್ನು ಪಡೆಯುವುದು. ತನು, ಮನ, ಧನ, ಗುರುಲಿಂಗ ಜಂಗಮಕ್ಕೆ ಎಡೆಮಾಡಿ ಸಮರ್ಪಣ ಭಾವದಿಂದ ಸಮಾಜದಲ್ಲಿ ಬೆರೆತು ದೇವರ ಕಾಣುವುದಾಗಿದೆ. ದೇಹ ದಂಡನವಾಗಲಿ, ದೇಹ ಗಟ್ಟಿಗೊಳಿಸುವುದಾಗಲಿ ಅಲ್ಲ. ದೇಹವು ಜನಪರ ಕಾರ್ಯಗಳಲ್ಲಿ ಸಹಕಾರಿಯಾಗಿ, ಕೊನೆಗೆ ನಿರ್ಲಿಪ್ತವಾಗಿ ಅನಂತತೆಯಲ್ಲಿ ಲೀನಗೊಳಿಸುವುದೇ ಶಿವಯೋಗ. ಇಂಥ ಶಿವಯೋಗದ ಮಹತ್ವವನ್ನು ಲಿಂ. ಪೂಜ್ಯ ಮಹಾಪ್ರವಾದಿ ರೇವಪ್ಪಯ್ಯ ಶರಣರು ರಚಿಸಿದ ಮನಬೋಧೆ ಗ್ರಂಥದಲ್ಲಿ ಕಾಣಬಹುದಾಗಿದೆ.

**ರೇವಪ್ಪಯ್ಯನವರ ತತ್ವಪದಗಳು :**

- **ಏಕಮುಖ**

ಈ ಮೇಲಿನ ತತ್ವಪದವು ರೇವಪ್ಪಯ್ಯನವರು ಗುರುವಿನ ಗುಲಾಮನಾಗುವ ತನಕ ಮೊಕ್ಷವಿಲ್ಲ ಜಗದೊಳು ಎಂಬ ವಾಣಿಯಂತೆ, ರೇವಪ್ಪಯ್ಯನವರು ತಮ್ಮ ಗುರುಗಳಾದ ಸಿದ್ಧಲಿಂಗರಿಂದ ಮುಕ್ತಿ ಪಡೆಯಲು ಹೇಳುತ್ತಾರೆ. ಈ ತತ್ವಪದದಲ್ಲಿ ಅಂತ್ಯ ಪ್ರಾಸವು ಹೇರಳವಾಗಿ ಕಾಣಿಸಿಕೊಂಡಿದ್ದು, ಆದಿ ಪ್ರಾಸವು ಅಲ್ಲಲ್ಲಿ ಕಾಣಿಸಿಕೊಂಡಿದೆ. ಮತ್ತು ಲಯವು ಬಂದಿರುವುದರಿಂದ ಹಾಡಲು ಬಹುಸೋಗಸಾಗಿ ಬರುತ್ತದೆ.

ಜಂಗಮನಿಲ್ಲ ಜಗದೊಳಗವ್ವ
ಜಂಗಮನೊಳಗ ಜಗ ಎಲ್ಲವ್ವ
ತಂಗಿ ಕೇಳೆ ಶಿವಗಂಗವ್ವ
ಮಂಗಲ ಮೂರುತಿ ಲಿಂಗವ್ವ ॥೧॥

ಆಕಾರ ಮಾಡಿ ಬಂದೆವ್ವ
ನಿರಾಕಾರ ಮಾಡಿ ನಡೆದವ್ವ
ಹಾಕ್ಯಾಡಿ ಮನಿಯೊಳು ಕುಂತೆವ್ವ
ಅದು ಏಕ ಮುಖಐತಿ ಶಾಂತವ್ವ ॥೨॥

ಶೂನ್ಯ ಸ್ಥದಾಗ ಜಂಗಮನವ್ವ
ಜಳಕಕ್ಕ ಬರತಾನ ಗುಪ್ತಿಂಡಿಯವ್ವ
ಬ್ರಹ್ಮನ ಬಿಂದು ಐತಿವ್ವ
ಅದರೊಳು ಕಂದ ತಾನೆ ಆಯಿತವ್ವ ॥೩॥

ಚಂದುಳ್ಳ ಮನಿಗೆ ಹೊಯ್ತೆವ್ವ
ಚಂದ ಚಂದದ ಧ್ವನಿ ತೆಗೆತೆವ್ವ
ಅರುವಿನೊಳು ಅರು ಧ್ವನಿ ತೆಗೆತೆವ್ವ
ಮರುವಿನ ಮಾಯ ಬಿಡವ್ವ ॥ ೪॥

ಪರಿಪರಿ ಲಾಡು ಹೆಡ್ಡವ್ವ
ಪರಮ ಪರುಷಿಗೆ ತಾ ಒಡ್ಡವ್ವ
ಪರಮ ಗುರು ಸಿದ್ಧಲಿಂಗಗೆವ್ವ
ಪರತರ ಮುಕುತಿ ನೀ ಪಡಿಯವ್ವ ॥೫॥

ಈ ಜಗದಲ್ಲಿ ಗುರುವನ್ನು ಅಥವಾ ಜಂಗಮನೊಳಗೆ ಜಗವು ಎಂಬತೆ ಹುಟ್ಟಿದಾಗ ಮೂಹೂರ್ತ ಹಿಡಿದು, ದೊಡ್ಡವರಾದ ಮೇಲೆ ಮದುವೆ ಮಾಡುವಾಗ, ಮತ್ತು ಸತ್ತರು ಕುಡಾ ಮೋಕ್ಷಮಾಡಲು ಗುರುವಿನ ಗುರುವಿನ ಅಗತ್ಯವಿದೆ. ಮತ್ತು ಗುರುವಿಲ್ಲದೆ ಯಾವ ಕಾರ್ಯವು ಸಾಗುವುದಿಲ್ಲ. ಯಾವುದೇ ಜಾತಿ, ಧರ್ಮ, ಪಂಥದವರು ಆಗಿರಲಿ ಅವರು ತಮ್ಮ ಗುರುವಿನ ಆಶೀರ್ವಾದವಿಲ್ಲದೇ ಯಾವ ಕಾರ್ಯವು ಮಾಡುವುದಿಲ್ಲ. ಇಲ್ಲಿ ರೇವಪ್ಪಯ್ಯನವರು ತಮ್ಮ ಗುರುಗಳ ಅಂಕಿತದೊಂದಿಗೆ ತಮ್ಮ ತತ್ವಪದಗಳನ್ನು ಮುಗಿಸುತ್ತಾರೆ. ಅವರು ಅವರ ಗುರುವಿಗೆ ನೀಡುವ ಪ್ರಾರ್ಥನೆ ಮತ್ತು ಎಲ್ಲರನ್ನು ಉದ್ದೇಶಿಸಿ ಸಿದ್ಧಲಿಂಗರ ದರ್ಶನವನ್ನು ಪಡಿರವ್ವ ಎಂದು ಹೇಳಿದ್ದಾರೆ.

- **ಮುಕ್ತನಾಗು**

ಈ ತತ್ವಪದದಲ್ಲಿ ರೇವಪ್ಪಯ್ಯನವರು ಕೆಟ್ಟಗುಣಗಳನ್ನು ತೆಗೆದು ಒಳ್ಳೆಯ ಗುಣವನ್ನು ಪಡೆಯಿರಿ ಅಂದರೆ ತಮ್ಮ ತಪ್ಪು ಅರಿವಾದಾಗ ಬಂದು ಕ್ಷಮೇ ಕೇಳುವವರಿಗೆ ಕ್ಷಮಿಸಿ ಅವರಿಗೆ ಉಪದೇಶಮಾಡಬೇಕೆಂದು ಹೇಳಿದ್ದಾರೆ.

ದುಷ್ಟ ಗುಣಗಳೆಲ್ಲ ಕುಟ್ಟಿ ಒಬ್ಬಳೆ ಹಸನ ಮಾಡಿ
ಕುಟ್ಟಿ ಕುಟ್ಟಿ ನೀನು ಹಸನವ ಮಾಡು ತಂಗೆಮ್ಮ ॥೧॥

ಆಧಾರ ಆಯಿತೆ ಗುರುವಿನ ಪಾದಪೂಜವು ಮಾಡಿ
ಪಾದಕ ಸಲ್ಲಿಸಿ ನೀನಿ ವಾದ ಅಳಿಯೆ ತಂಗೆಮ್ಮ ॥೨॥

ಇಲ್ಲಿ ರೇವಪ್ಪಯ್ಯನವರು ಕೆಟ್ಟ ಗುಣಗಳನ್ನು ಹುಡಕಿ ಹುಡಕಿ ಸ್ವಚ್ಛಗೊಳಿಸಬೇಕು. ನೀನು ಒಬ್ಬಳೆ ಹಸನ ಮಾಡಬೇಕು ತಂಗೆಮ್ಮ ಗುರುವಿನ ಆಶೀರ್ವಾದ ಆಗಬೇಕಾದರೆ ಈ ಕಾರ್ಯವು ಮಾಡಲೇಬೇಕು ಮತ್ತು ಪಾದಪೂಜ್ಯವು ಮಾಡಿ ಪಾದುಕ ಸಲ್ಲಿಸಿ ನೀನು ಪ್ರಮಾಣ ಮಾಡು ತಂಗೆಮ್ಮ ಎಂದು ಹೇಳಿದ್ದಾರೆ.

ಛಿದ್ರ ಗುಣಗಳೆಲ್ಲ ರುದ್ರಾಕ್ಷಿ ಧರಿಸಿನ್ನ
ರುದ್ರದಾಗ ಪ್ರಾಣಲಿಂಗ ತಿಳಿಯಬೇಕ ತಂಗೆಮ್ಮ ॥೩॥

ನಾನು ನೀನು ಬೇರೇನೆ ನನಗ ನಿನಗ ಎರಡೇನೆ
ನಾನು ನೀನು ಎಂಬುವ ವಾದ ತಿಳಿಯಬೇಕ ತಂಗೆಮ್ಮ ॥೪॥

ಯೋಗ ಆಸನ ಬಲಸಿ ಪಂಚ ಮುದ್ರೆ ಬಲಸಿ
ಪಂಚೀಸ ಗುಣಗಳು ಅಳಿಯ ಬೇಕು ತಂಗೆವ್ವ ॥೫॥

ವಿಭೂತಿ ಧರಿಸಿದನಮೇಲೆ ಭಾವ ಗೆದಿಬೇಕು ಮನಸ್ಸು ಮನವನ್ನು ಸೋಸಿ ನಿರ್ಮಲದಿಂದ ಧರಿಸಬೇಕು ಎಂದು ಪೂಜೆಯ ಮಾತುಗಳು ಅಪ್ಪವರು ಈ ರೀತಿ ಹೇಳಿದ್ದಾರೆ. ಕೆಟ್ಟ ಗುಣಗಳನ್ನು ರುದ್ರಾಕ್ಷಿ, ಹಾಕಿಕೊಂಡು ಜಪವ ಮಾಡುತ್ತ ನಿಜವಾದ ಆತ್ಮ ಪ್ರಾಣಲಿಂಗ ತಿಳಿಯಬೇಕು ಎಂದು ಹೇಳುತ್ತಾರೆ. ಮತ್ತು ನಾನು ನೀನು ಬೇರೇನೆ ನನಗ ನಿನಗ ಎರಡೇನೆ ನಾನು – ನೀನು, ನನಗ – ನಿನಗ ಎಂದು ತೋರಿಬೇಕು. ಹಾಗೂ ಯೋಗ ಆಸನ ಮುದ್ರೆ ಬಳಸಿ ಪಂಚೀಸ ಗುಣಗಳು ಆಳಿಯಬೇಕು. ದೇವರಿಗೆ ಅಥವಾ ಗುರುವಿನ ವಿಚಾರವ ಮಾಡಿ ಕೆಟ್ಟ ಗುಣಗಳನ್ನು ತೆಗೆದು ಹಾಕಬೇಕು ಎಂದು ಹೇಳಿದ್ದಾರೆ.

ಇಪ್ಪತ್ತಂದು ಸಾವಿರ ತಪ್ಪಲದ್ಧಂಗೆ ಆರುನೂರು
ತಾನೆ ಜಪ ಆಗತಾವ ತಿಳಿಯಬೇಕ ತಂಗೆಮ್ಮ ॥೬॥

ಪ್ರಸಾದ ಮುಗಿವಾಗ ಬ್ಯಾಸರ ಬಂದ್ಧಂಗ ಮಾತಾಡಬೇಡ
ನಿರ್ಮಲ ಮನಸಿಲಿಂದ ಮುಗಿಯಬೇಕ ತಂಗೆಮ್ಮ ॥೭॥

ಕಲ್ಯಾಣಿ ಪುರವಾಸ ಹುಲಿಕುಂತಿ ಸಿದ್ಧೇಶ
ಸಿದ್ಧಲಿಂಗನ ಪಾದಕ ಹೊಂದಿ ಮುಕ್ತನಾಗ ತಂಗೆಮ್ಮ ॥೮॥

ರೇವಪ್ಪಯ್ಯನವರು ಇಲ್ಲಿ ಯಾರು ಮಾಡಿದ್ದರು ಜಪವ ಅಷ್ಟೆ ಇವರೇ ಮಾಡಬೇಕು ಎಂಬ ನಿರ್ಬಂಧವಿಲ್ಲ. ಮನಸ್ವಚ್ಛದಿಂದ ಮಾಡಿದ್ದರೆ ಕಳ್ಳನು ಯೋಗಿ ಯಾಗುತ್ತಾರೆ. ನನ್ನಗೆ ಏನು ಸಿಗಲಿಲ್ಲ ಈ ಪೂಜೆಯಿಂದ ಎಂದು ಬ್ಯಾಸರ ಬಂದ್ಹಂಗ ಮಾತಾಡಬೇಡ, ಪ್ರಸಾದವು ಸಿಗಲಿಲ್ಲ ಎಂದು ಕೊರಗಬೇಡ, ಶುದ್ಧವಾದ ಮನಸ್ಸಿನಿಂದ ಪೂಜೆ ಮುಗಿಸಬೇಕು ತಂಗೆಮ್ಮ. ಅಲ್ಲಿ ನಿನ್ನ ಮನಸ್ಸು ಎಷ್ಟು ನಿರಾಳವಾಗಿದೆ ಎಂದು ತಿಳಿಯುತ್ತದೆ. ಹಾಗೂ ಈ ಕಲ್ಯಾಣದಲ್ಲಿ ಹುಲಕುಂಟಿ ಸಿದ್ಧೇಶ, ಸಿದ್ದಲಿಂಗನ ಪಾದಕ ಹೊಂದಿ ಮುಕ್ತನಾಗು ಎಂದು ರೇವಪ್ಪಯ್ಯನವರು ಕೆಟ್ಟ ಗುಣಗಳನ್ನು ಶುದ್ಧಗೊಳಿಸುವ ವಿಧಾನ ಸ್ವಚ್ಛವಾದ ಮನಸ್ಸಿನಿಂದ ಶುಭ್ರವಾಗಿ ಗುರುವನ್ನು ಪೂಜೆ ಮಾಡುವುದರ ಮುಖಾಂತರ ಮತ್ತು ಧ್ಯಾನಿಸುವುದರ ಮುಖಾಂತರ ಹಸನಗೊಳಿಸಬಹುದು ಎಂಬುದು ಈ ತತ್ವಪದಗಳಲ್ಲಿ ತಮ್ಮ ಶಿಷ್ಯರಿಗೆ ಹೇಳಿದ್ದಾರೆ.

- **ಕರಿಲಾಕ ಬಂದಾರಮ್ಮ**

ಈ ತತ್ವಪದವು ಶರಣರು ಕೊನೆಯ ಅಂದರೆ ತಮ್ಮ ಲಿಂಗೈಕ್ಯದ ಸಮಯದಲ್ಲಿ ಹಾಡಿರುವ ಪದ್ಯ ಎಂದು ಶಿಷ್ಯರು ತಿಳಿಸಿದ್ದಾರೆ. ಎಲ್ಲರನ್ನು ಅಂದರೆ ಹುಟ್ಟಿದ ಮನೆ ಅಮ್ಮ, ಅಪ್ಪ ಅಕ್ಕ, ತಮ್ಮ, ಅಕ್ಕ, ತಂಗಿ ಹೀಗೆ ಎಲ್ಲರನ್ನು ಬಿಟ್ಟು ಹೋಗಬೇಕು ಮತ್ತು ತಾವು ಆಡಿದ ಪಾಡಿದ ಊರು, ಷಟ್‌ಸ್ಥಲ, ಶಿವಯೋಗಗಳು ಹೀಗೆ ಎಲ್ಲವನ್ನು ಬಿಟ್ಟು ಹೋಗುವುದನ್ನು ಶರಣರು ಬಹು ಸುಂದರವಾಗಿ ಈ ತತ್ವಪದದಲ್ಲಿ ತಿಳಿಸಿದ್ದಾರೆ.

ಕರಿಲಾಕೆ ಬಂದಾರಮ್ಮ ತಂಗಿ ದೂರಿನವರು ॥ಪ॥
ಒಂಬತ್ತು ತಿಂಗಳೊಳು ಹೊಟ್ಟೆಯಲ್ಲಿ ಜನಿಸಿದವರು
ಅಂಥವರಿಗೆ ಬಿಟ್ಟು ಪೋಗುವದಮ್ಮ
ಕರಿಲಾಕ ಬಂದಾರಮ್ಮ ತಂಗಿ ದೂರಿನವರು ॥೧॥

ಹಾಲು ಸಕ್ಕರೆ ಉಣಿಸಿದವರು
ಮೇಲೆಣ್ಣೆ ಧರಿಸಿದವರು
ಅಂಥವರಿಗೆ ಬಿಟ್ಟು ಪೋಗುವದಮ್ಮ
ಕರಿಲಾಕ ಬಂದಾರಮ್ಮ ತಂಗಿ ದೂರಿನವರು ॥೨॥

ಬಂಗಾರ ಜಡೆ ಹೊತ್ತಿದವರು
ಸುಂದರ ಮಡಿ ಉಟ್ಟಿದವರು
ಅಂಥವರಿಗೆ ಬಿಟ್ಟು ಪೋಗುವದಮ್ಮ
ಕರಿಲಾಕ ಬಂದಾರಮ್ಮ ತಂಗಿ ದೂರಿನವರು ॥೩॥

ಷಟಸ್ಥಲ ಶಿವಯೋಗಿಗಳು
ಎಷ್ಟು ಜನ ನೆರೆಯುವರಮ್ಮ
ಬಹು ಕಷ್ಟದಿಂದಲ್ಲಿ ಅವರು
ಕರಿಲಾಕೆ ಬರಹುರಮ್ಮ ತಂಗಿಮ್ಮ ॥೪॥

ಇಂದಿನ ರಾತ್ರಿಯೊಳು ಏನೇನು ಆಗುವದಮ್ಮ
ಸ್ವಾಮಿ ಶಂಕರನ ಮನೆಯೊಳಗಮ್ಮ
ಅಂಥವರಿಗೆ ಬಿಟ್ಟು ಪೋಗುವದಮ್ಮ
ಕರಿಲಾಕ ಬಂದಾರಮ್ಮ ತಂಗಿ ದೂರಿನವರು ॥೫॥

ತೋಟ ತೋಟದಗೊಂಟ ಎಷ್ಟು ಜನ
ನೆರೆಯುವರಮ್ಮ
ಬಹು ಕಷ್ಟದಿಂದಲ್ಲಿ ಅವರು ಬರುವರಮ್ಮ
ಕರಿಲಾಕ ಬಂದಾರಮ್ಮ ತಂಗಿ ದೂರಿನವರು ॥೬॥

ತಾಯಿ ತಂದೆಯರ ಬಿಟ್ಟು
ಬಂಧು ಬಳಗವ ಬಿಟ್ಟು
ದುನಿಯಾ ಸಂಚಾರ ಮಾಡಿದಮ್ಮ
ಕರಿಲಾಕ ಬಂದಾರಮ್ಮ ತಂಗಿ ದೂರಿನವರು ॥೭॥

ಅಣ್ಣ ತಮ್ಮರ ಬಿಟ್ಟು
ಅಕ್ಕ ತಂಗೆಯರ ಬಿಟ್ಟು
ದುನಿಯಾ ಸಂಚಾರ ಮಾಡಿದಮ್ಮ
ಕರಿಲಾಕ ಬಂದಾರಮ್ಮ ತಂಗಿ ದೂರಿನವರು ॥೮॥

ಒಂಬತ್ತು ತಿಂಗಳೊಳು ಹೊಟ್ಟೆಯಲ್ಲಿ ಜನಿಸಿದವರ ಬಿಟ್ಟು ಹೋಗಬೇಕು ತಂಗಿ, ಹಾಲು ಸಕ್ಕರೆ ಊಟ ಮಾಡಿಸಿದವರನ್ನು ಬಿಟ್ಟು, ಯಾವಾಗ ಹೋಗುವುದು ಬರತದ ಆವಾಗ ಎಲ್ಲವನ್ನು ಬಿಟ್ಟು ಹೋಗಬೇಕು ಎಂದು ರೇವಪ್ಪಯ್ಯನವರು ಹೇಳಿದ್ದಾರೆ. ಬಂಗಾರದ ಜಡೆ ಹೊತ್ತಿದ್ದವರನ್ನು ಮತ್ತು ಸುಂದರ ಮಡಿ ಉಟ್ಟಿದರನ್ನು, ಷಟ್‌ಸ್ಥಲ ಶಿವಯೋಗಿಗಳನ್ನು, ಹಾಗೂ ಏಷ್ಟು ಜನ ನೆನೆದರು ಅವರು ಬಂದು ಕರಕೊಂಡು ಒಯತ್ತಾರಮ್ಮ ತಂಗೆಮ್ಮ ಎಂದು ಹೇಳಿದ್ದಾರೆ. ಇವತ್ತಿನ ಏನೇನು ಆಗತಾದ ಗೊತ್ತಿಲ್ಲ ಸ್ವಾಮಿ ಶಂಕರನ್ನು ಬಿಟ್ಟು ಹೊಗಬೇಕು ತಂಗೆಮ್ಮ ಎನ್ನುತ ರೇವಪ್ಪಯ್ಯನವರು ಎಲ್ಲವನ್ನು ಬಿಟ್ಟು ಕರಿಲಾಕ ಬಂದರು ಹೋಗಬೇಕು ಎಂದು ತಮ್ಮ ತತ್ವಪದಗಳಲ್ಲಿ ತಿಳಿಸಿದ್ದಾರೆ.

- **ಮುತ್ತು**

ಈ ಮೇಲಿನ ತತ್ವಪದದಲ್ಲಿ ಅಲ್ಲಲ್ಲಿ ಪ್ರಾಸ ಕಾಣಿಸಿಕೊಳ್ಳುತ್ತದೆ. ಮತ್ತು ಲಯವು ಸೋಗಸಾಗಿ ಬಂದಿದೆ. ರೇವಪ್ಪಯ್ಯನವರು ಜ್ಞಾನಿಯ ಒಳ್ಳೆಯ ಗುಣಗಳನ್ನು ನಿರೂಪಿಸಿದ್ದಾರೆ. ಜ್ಞಾನಿಯಾದವರು ಯಾವಗಲೂ ಒಳ್ಳೆಯದನ್ನು ಮಾಡುತ್ತಾರೆ. ತಮಗೆ ವಿಷ ಹಾಕಿದವರನ್ನು ಹಾಲನ್ನೆ ಹಾಕಿ ಬದುಕುಸುತ್ತಾರೆ. ಆದರೆ ಅಜ್ಞಾನಿ ತನ್ನ ಸುಖಕ್ಕೊಸ್ಕರ ಇತರರನ್ನು ವಿಷ ಹಾಕುವ ಇಚ್ಚೆವುಳ್ಳವರಿರುತ್ತಾರೆ. ಎಂಬುದು ಈ ಕೆಳಗಿನ ಪದದಲ್ಲಿ ಕಾಣಬಹುದಾಗಿದೆ.

ಜ್ಞಾನೆಯ ಗುಣ ಬ್ಯಾರೆ ಶಂಭೋ
ಅಜ್ಞಾನಿಯ ಗುಣ ಬ್ಯಾರೆ
ಜ್ಞಾನಿಯು ಹಾಲನ್ನು ಕರೆಯುತ್ತಲಿರುವ
ಅಜ್ಞಾನಿ ತನ್ನ ಸುಖವನ್ನು ಬಯಸಿರುವ ॥೧॥

ಅಂದರೆ ಇಲ್ಲಿ ಜ್ಞಾನಿಯು ಜಾಸ್ತಿ ಮಾತನಾಡುವುದಿಲ್ಲ. ಅಜ್ಞಾನಿಯು ಪದೇ ಪದೇ ಹೇಳಿದ್ದೆ ಹೇಳ್ಳುತ್ತಲಿರುತ್ತಾನೆ. ಆದರೆ ಅಜ್ಞಾನಿಯು ಏನು ಮಾಡದೆ ಎಲ್ಲಾ ನಾನೇ ಮಾಡಿದ್ದು ಎಂದು ಜಂಬಕೊಚ್ಚುತ್ತ ಇರುತ್ತಾನೆ. ಅದಕ್ಕೆ ಜ್ಞಾನಿ ಬ್ಯಾರೆ ಅಜ್ಞಾನಿ ಬ್ಯಾರೆ. ಎಂದು ಶರಣರು ಹೇಳಿದ್ದಾರೆ.

ಕತ್ತೆ ಕುದುರೆ ಎರಡು ಶಂಭೋ
ಜತೆಯಲಿ ಮೈತಿತ್ತು
ಕತ್ತೆಯ ಮೈಲಿಗೆ ಹೊತ್ತೂತ್ತು ಸಾಯ್ತು

ಉತ್ತಮ ಕುದುರೆ ಒಡೆಯನ ಜ್ವಾಪಾನ ಮಾಡಿತು ॥೨॥

ರೇವಪ್ಪಯ್ಯನವರು ಕತ್ತೆ ಕುದುರೆ ಎಂದು ಸೂಚಿಸಿರುವ ಈ ಸಾಲುಗಳಲ್ಲಿ ಎರಡು ಜತೆಯಲಿ ಇರುತ್ತಿದ್ದರು, ಕತೆಯು ಕೆಟ್ಟದನ್ನು ಅಂದರೆ ಮೈಲಿಗೆ ಹೊತ್ತೂತ್ತು ಅದರ ಜೊತೆಗೆ ಒಡೆಯನನ್ನು ಸಾಯಿಸುತ್ತದೆ. ಅದೇ ಕುದುರೆ ತಾನು ಜೋಪಾನವಾಗಿರುವುದಲ್ಲದೆ ತನ್ನ ಒಡೆಯನನ್ನು ಜೋಪಾನ ಮಾಡುತ್ತದೆ. ಆದ್ದರಿಂದ 'ಉತ್ತಮರ ಸಂಗ ಹೆಜ್ಜೇನು ಸವಿದಂತೆ' ಒಳ್ಳೆದು ಬಯಸುವ ಕುದುರೆಯ ಸಂಗವೇ ಲೇಸು ಎಂದು ಅಪ್ಪನವರು ಹೇಳಿದ್ದಾರೆ.

ಭ್ರಮರವೆ ಎರಡು ಶಂಭೋ
ಮರದೊಳಗೆ ಇರುತ್ತಿತ್ತು
ಭ್ರಮರವು ಮರವೆ ಕೊರೆದಿತ್ತು
ಜೇನು ಲಿಂಗಕ್ಕೆ ತುಪ್ಪವ ಎರದಿತ್ತು. ॥೩॥

ಭ್ರಮರವೆ ಎರಡು ಶಂಭೋ ಮರದೊಳಗೆ ಇರುತ್ತಿತ್ತು, ಭ್ರಮರವು ಮರವೆ ಕೊರದಿತ್ತು, ಇಲ್ಲಿ ಭ್ರಮರವೆ ಲಿಂಗಕ್ಕೆ ತುಪ್ಪವ ಎರದಿತ್ತು, ಇಲ್ಲಿ ಭ್ರಮರವೆ ಎರಡು ಅಂದರೆ ಜೇನುಹುಳ್ಳು ಮತ್ತು ಮರವನ್ನು ಕೊರೆಯುವ ಭ್ರಮರ ಇಲ್ಲಿ ಎರಡು ಭ್ರಮರದಲ್ಲಿ ಲಿಂಗಕ್ಕೆ ಜೇನುತುಪ್ಪ ಕೊಡುವ ಭ್ರಮರ ಲೇಸು ಏಕೆಂದರೆ ಎರಡು ಇರುವುದು ಮರದಲ್ಲಿ. ಒಂದು ಭ್ರಮರ ಮರವನ್ನೇ ಕೊರೆದು ಹಾಕಿದರೆ, ಇನ್ನೊಂದು ಭ್ರಮರ ಆ ಮರದ ಕೊಂಬೆಗೆ ಇದ್ದುಕೊಂಡು ಜೇನು ತುಪ್ಪ ಮಾಡುತ್ತದೆ. ಇಲ್ಲಿ ಅಜ್ಜನವರು ಜೇನು ತುಪ್ಪ ಮಾಡುವ ಭ್ರಮರವೆ ಶ್ರೇಷ್ಠವೆಂದು ಹೇಳಿದ್ದಾರೆ.

ಉಪ್ಪು ಮುತ್ತು ಎರಡು ಶಂಭೋ
ನೀರೊಳಗೆ ಇರುತ್ತಿತ್ತು
ಉಪ್ಪು ಕರಗಿ ಹೋಗಿತ್ತು ಮುತ್ತು ಉಳಿದಿತ್ತು
ಇದೇ ಗುರು ಸಿದ್ಧಲಿಂಗ ಹೇಳಿದ ಮಾತು ॥೪॥

ಉಪ್ಪು ಮುತ್ತು ಎರಡು ಇರುವುದು ನೀರಿನಲ್ಲಿ. ಉಪ್ಪು ಕರಗಿ ಹೋಗಿತ್ತು ಮುತ್ತು ಉಳಿದಿತ್ತು. ಅಂದರೆ ಇಲ್ಲಿ ಕಲ್ಲಿನಲ್ಲಿಯೇ ಶಿಲೆಯು ತಯಾರಾಗುತ್ತದೆ. ಎಷ್ಟು ಉಳಿಪೆಟ್ಟು ಹಾಕಿದರೂ ಶಿಲೆಯಾಗುವ ಕಲ್ಲು ತಾಳುತ್ತದೆ. ತಾಳದ ಕಲ್ಲು ಒಡೆದು ಛಿಡಿಗಳಾಗುತ್ತದೆ. ಮತ್ತು ಇನ್ನಿತರ ಕಾರ್ಯಗಳಿಗೆ ಉಪಯೋಗವಾಗುತ್ತದೆ. ಇಲ್ಲಿ ಒಳ್ಳೆಯವರಿಗೆ ಎಷ್ಟು ಕಷ್ಟ ಕೊಟ್ಟರೂ ಅದನ್ನು ಸಹಿಸಿಕೊಂಡು ಕೊನೆಗೆ ಮುತ್ತಾಗುತ್ತಾರೆ. ಆದರೆ ಉಪ್ಪಿನಂತವರು ಕೆಟ್ಟವರು ಕೊನೆಗೆ ಕರಗುತ್ತಾರೆ. ಎರಡು ಇರುವುದು ನೀರಿನಲ್ಲಿ ಶಂಭೋ ಎಂದು ಹೇಳಿ ಮುಗಿಸುತ್ತಾರೆ.
ಹೀಗೆ ರೇವಪ್ಪಯ್ಯನವರು ತಮ್ಮ ತತ್ವಪದಗಳಲ್ಲಿ ತಮ್ಮ ಮನದ ಇಂಗಿತವನ್ನು ತತ್ವಪದಗಳಲ್ಲಿ ತಿಳಿಸಿದ್ದಾರೆ. ರೇವಪ್ಪಯ್ಯನವರು ತಮ್ಮ ಆತ್ಮದ ಮಾತುಗಳನ್ನು ಈ ಮೇಲಿನ ಹಾಡುಗಳ ಮುಖಾಂತರ ಹೇಳಿದ್ದಾರೆ.

**ಪರಾಮರ್ಶನ ಗ್ರಂಥಗಳು :**

೧. ನಾಗಲಿಂಗ ಕವಿ 'ಮಹಾಬೆಳಗು' – ೨೦೧೧
೨. ಎಂ.ಜಿ. ಗಂಗನಪಳ್ಳಿ 'ರೇವಪ್ಪಯ್ಯ ಶರಣರು' – ೧೯೯೯
೩. ಪಂಚಾಕ್ಷರಿ ಪುಣ್ಯಶೆಟ್ಟಿ 'ವಿಶ್ವ ಪುತ್ಥಳಿ' – ೧೯೯೫
೪. ಬಸಪ್ಪಾ ಹದನೂರೆ ಜನವಾಡಕರ 'ಶ್ರೀ ಸುಕ್ಷೇತ್ರ ನಾವದ್ಗಿಯ ರೇವಪ್ಪಯ್ಯನವರ ಜೀವನ ಚರಿತ್ರೆ' – ೨೦೧೫
೫. ಶ್ರೀ. ಷ. ಬ್ರ. ದೇಶಿಕೇಂದ್ರ ರೇವಣಸಿದ್ಧ 'ಶ್ರೀ ಸಿದ್ಧಲಿಂಗೇಶ್ವರ ಪುರಾಣ' – ೨೦೧೬
೬. ರೇವಪ್ಪಯ್ಯನವರು ಸಂ. ನಾಗಲಿಂಗ ಕವಿ 'ಮನಬೋಧೆ' – ೧೯೯೫
೭. ಎಸ್.ಎಂ. ಹೀರೆಮಠ 'ಬೀದರ ಜಿಲ್ಲೆಯ ತತ್ವಪದಕಾರರ ಸ್ಮಾರಕಗಳು' ಭಾಲ್ಕಿ–ಹುಮನಾಬಾದ ಸಂ. ೨೦೧೨
೮. ಧರ್ಮೋಪದೇಶ ಪತ್ರಿಕೆಗಳು
೯. ಎಂ. ಜಿ. ಗಂಗನಪಳ್ಳಿ 'ರೇವಪ್ಪಯ್ಯ ಶರಣರು' – ೧೯೯೮
೧೦.ಹನ್ನೆರಡನೆಯ ಶತಮಾನದ ಶರಣರ ವಚನಗಳು